ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 15 RNI Number : KNKAN/25/A2770 17-01-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :15 ರಾಯಚೂರು 17-01-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಸಿಎಂ ಸ್ಥಾನದ ವಿಷಯ ನನ್ನ, ಸಿಎಂ- ಹೈಕಮಾಂಡ್ ನಡುವಣ ವಿಚಾರ : ಡಿಸಿಎಂ

ದೆಹಲಿ/ಬೆಂಗಳೂರು,ಜ.16-

ಸಿಎಂ ಸ್ಥಾನದ ವಿಷಯ ನನ್ನ, ಸಿಎಂ ಹಾಗೂ ಹೈಕಮಾಂಡ್ ನಡುವಣ ವಿಚಾರ. ಇದು ಸಾರ್ವಜನಿಕವಾಗಿ ಚರ್ಚೆ ಮಾಡುವ ವಿಷಯವಲ್ಲ ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.



ಈ ಕುರಿತು ದೆಹಲಿಯಲ್ಲಿ ಅವರು ಮಾತನಾಡಿದರು. ರಾಹುಲ್ ಗಾಂಧಿ ಅವರ ಜೊತೆ ಸಿಎಂ ಸ್ಥಾನದ ಬಗ್ಗೆ ಚರ್ಚೆ ಮಾಡಲಾಯಿತೇ? ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, 'ಇಂದು ಅಸ್ಸಾಂ ಚುನಾವಣೆ ಸಂಬಂಧ ಹೈಕಮಾಂಡ್ ನಾಯಕರ ಜತೆ ಸಭೆ ಇದೆ ಎಂದರು. ಈ ಸಭೆಯ ಯೋಜನೆಗಳೇನು ಎಂದು ಕೇಳಿದಾಗ, 'ನಮ್ಮ ಪಕ್ಷದ ಯೋಜನೆಗಳನ್ನು ಬಹಿರಂಗಪಡಿಸಲು ಹೇಗೆ ಸಾಧ್ಯ? ಇದನ್ನು ಪಕ್ಷದ ಮಟ್ಟದಲ್ಲಿ ಮಾತ್ರ ಚರ್ಚೆ ಮಾಡಲಾಗುವುದು. ಸಾರ್ವಜನಿಕವಾಗಿ ಅಲ್ಲ. ಏನಾದರೂ ಮಾಹಿತಿ ನೀಡುವುದಿದ್ದರೆ, ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಇದ್ದಾರೆ, ಅವರು ನೀಡುತ್ತಾರೆ' ಎಂದರು.

ಈ ಪ್ರವಾಸದಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತೀರಾ? ಎಂದು ಕೇಳಿದಾಗ, 'ನಾನು ಪಕ್ಷದ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದೇನೆ, ನೋಡೋಣ' ಎಂದು ಹೇಳಿದರು.

ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೀರಾ? ಎಂದು ಕೇಳಿದಾಗ, 'ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ಕಾನೂನಾತ್ಮಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಹೀಗಾಗಿ, ಕಾನೂನು ತಜ್ಞರು ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದೇನೆ' ಎಂದು ತಿಳಿಸಿದರು.

ರಾಹುಲ್ ಜತೆಗೆ ಮಾತನಾಡಿದ್ದನ್ನು ಬಹಿರಂಗ ಪಡಿಸಲು ಆಗಲ್ಲ: ಮೈಸೂರು ವಿಮಾನ ನಿಲ್ದಾಣದ ರನ್ ವೇ ಬಳಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೊತೆ ಪ್ರತ್ಯೇಕವಾಗಿ ಚರ್ಚೆ ಬಗ್ಗೆ ಪ್ರತಿಕ್ರಿಯಿಸಿದ್ದ ಅವರು, ಅದನ್ನೆಲ್ಲ ನಾನು ಬಹಿರಂಗಪಡಿಸಲು ಆಗುವುದಿಲ್ಲ. ಮಾತನಾಡಿಲ್ಲ ಎಂದು ನಾನು ಹೇಳುವುದಿಲ್ಲ. ಅದು ನನ್ನ ಹಾಗೂ ಅವರಿಗೆ ಬಿಟ್ಟ ವಿಚಾರವಾಗಿದೆ. ಅಲ್ಲದೇ, ನಾನು ಅವರನ್ನು ಭೇಟಿ ಮಾಡುವುದು ಹೊಸತೇನಲ್ಲ. ನಾಳೆ ದೆಹಲಿಗೆ ಹೋದಾಗ ಎಲ್ಲಾ ನಾಯಕರು ಅಲ್ಲೇ ಇರುತ್ತಾರೆ. ಮತ್ತೆ ಭೇಟಿ ಮಾಡುತ್ತೇನೆ ಎಂದಿದ್ದರು.

3ನೇ ಪುಟಕ್ಕೆ

ಬಿಜೆಪಿಪ್ರಾದೇಶಿಕ ಪಕ್ಷಗಳನ್ನು ಉಳಿಸುವುದಿಲ್ಲ: ಬಿ.ಆರ್.ಪಾಟೀಲ್

ಬೆಂಗಳೂರು,,ಜ.14-

ಪ್ರಾದೇಶಿಕ ಪಕ್ಷಗಳನ್ನು ಬಿಜೆಪಿ ಉಳಿಸುವುದಿಲ್ಲ. ಇದರ ಅರಿವು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಗೊತ್ತಿದೆಯೇ? ಎಂದು ರಾಜ್ಯ ಸರಕಾರದ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಪ್ರಶ್ನಿಸಿದ್ದಾರೆ.



ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಗರು ಪ್ರಾದೇಶಿಕ ಪಕ್ಷಗಳನ್ನು ಮುಗಿಸಿ ಬಿಡುತ್ತಾರೆ, ಇದು ಕುಮಾರಸ್ವಾಮಿಗೆ ಗೊತ್ತಿಲ್ಲವೇ?. ಇನ್ನೊಂದೆಡೆ, ಬಿಜೆಪಿ ಜೊತೆಗೆ ಹೋದ ಕುಮಾರಸ್ವಾಮಿಗೆ ಭ್ರಮ ನಿರಸನ ಆಗಿದೆ. ಹೀಗಾಗಿಯೇ, ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಬರುತ್ತೇನೆ ಎನ್ನುತ್ತಿದ್ದಾರೆ. ಕುಮಾರಸ್ವಾಮಿಗೆ ಪಾಪ ಕೇಂದ್ರದಲ್ಲಿ ಏನು ತೊಂದರೆ ಆಗುತ್ತಿದೆಯೋ ಅಥವಾ ಅವರ ಮಾತು ಯಾರು ಕೇಳುತ್ತಿಲ್ಲವೊ ಎಂದು ಟೀಕಿಸಿದರು.

ಮುಂದೆ ಜೆಡಿಎಸ್ ಪಕ್ಷ ಇರುತ್ತದೆಯೋ, ಇಲ್ಲವೊ ಎಂಬುದನ್ನು ದೇವೇಗೌಡರಿಗೇ ಕೇಳಬೇಕು. ಜೆಡಿಎಸ್ ಪಕ್ಷದ ಜನಕ ಅವರೇ ಎಂದ ಅವರು, ಇತ್ತೀಚಿನ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯದ ಸಂಬಂಧಗಳು ಹದಗೆಡುತ್ತಿವೆ. ಇದು ಒಕ್ಕೂಟ ವ್ಯವಸ್ಥೆಗೆ ದೊಡ್ಡ ಸವಾಲಾಗಿದೆ.

ಅನುದಾನ ಹಂಚಿಕೆ ಒಂದು ಕಡೆಯಾದರೆ, ಹಲವು ಕಾನೂನುಗಳನ್ನು ಬದಲಾವಣೆ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ದಕ್ಷಿಣ ಭಾರತದ ಜನಸಂಖ್ಯೆ ಕಡಿಮೆ ಇದೆ, ಉತ್ತರ ಭಾರತದಲ್ಲಿ ಹೆಚ್ಚಿದೆ. ಜನಗಣತಿ ಮುಗಿದ ಮೇಲೆ ಲೋಕಸಭಾ ಕ್ಷೇತ್ರಗಳು ಉತ್ತರ ಭಾರತಕ್ಕೆ ಹೆಚ್ಚಾಗಲಿವೆ ಎನ್ನುವ ಆತಂಕ ನಮಗೆ ಇದೆ. ಇದೇ ಕಾರಣ


3ನೇ ಪುಟಕ್ಕೆ

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಸೂಚನೆ

ರಾಯಚೂರು ಜಿಲ್ಲಾ ಉತ್ಸವದ ಕಾರ್ಯಕ್ರಮಗಳು ಫೆ.5, 6, 7ರವರೆಗೆ ನಿರಂತರ ನಡೆಯಲಿ

ರಾಯಚೂರು,ಜ.16

ಈ ಮೊದಲು ನಿರ್ಧರಿಸಿದ್ದ ರಾಯಚೂರು ಜಿಲ್ಲಾ ಉತ್ಸವ-2026ರ ಎಲ್ಲ ಕಾರ್ಯಕ್ರಮಗಳು ಪರಿಷ್ಕೃತ ದಿನಾಂಕ 2026ರ ಫೆಬ್ರವರಿ 5, 6 ಮತ್ತು 7ರವರೆಗೆ ನಿರಂತರ ನಡೆಯುವಂತೆ ಕಾರ್ಯ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾಗಬೇಕು ಎಂದು ರಾಯಚೂರು ಉತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆಯಾ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದರು.



ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜನವರಿ 16ರಂದು ನಡೆದ ಮತ್ತೊಂದು ಸುತ್ತಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಬೇರೆ ಬೇರೆ ದಿನಾಂಕಗಳಂದು ನಿಗದಿಯಾದ ಕಾರ್ಯಕ್ರಮಗಳನ್ನು ಯತಾರೀತಿಯಲ್ಲಿ ನಡೆಸಬೇಕು.

ಉತ್ಸವದ ಸಿದ್ಧತೆಗೆ ಇದೀಗ ಸ್ವಲ್ಪ ದಿನಗಳ ಕಾಲಾವಕಾಶ ಲಭಿಸಿದೆ. ಕೆಲವು ಸ್ಪರ್ಧೆಗಳಲ್ಲಿ ಮಾತ್ರ ಸ್ವಲ್ಪ ಮಾರ್ಪಾಡುಗಳಾಗಲಿವೆ. ಇನ್ನುಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ. ಅಧಿಕಾರಿಗಳು ಮತ್ತು ಸಿಬ್ಬಂದಿ ವಿರಮಿಸದೇ ನಿರಂತರವಾಗಿ ಉತ್ಸವದ ನಾನಾ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜನವರಿ 31 ರಿಂದ ಎರಡು ದಿನ ಮಕ್ಕಳ ಉತ್ಸವ: ಜನವರಿ 31 ಹಾಗೂ ಫೆಬ್ರವರಿ 1ರಂದು ಎರಡು ದಿನಗಳ ಕಾಲ ಮಕ್ಕಳ ಉತ್ಸವ ನಡೆಸಲು ತೀರ್ಮಾನಿಸಲಾಗಿದೆ. ಈ ಉತ್ಸವದಲ್ಲಿ ಜಿಲ್ಲೆಯ ಎಲ್ಲ ಪ್ರತಿಭಾನ್ವಿತ ಮಕ್ಕಳಿಗೆ ಅವಕಾಶ ಸಿಗಬೇಕು. ಈ ಉತ್ಸವದ ಬಗ್ಗೆ ವ್ಯಾಪಕ ಪ್ರಚಾರ ನಡೆಸಬೇಕು. ಸಣ್ಣ ವಯೋಮಾನದ ಮಕ್ಕಳಿಗು ಅವಕಾಶ ಸಿಗುವ ಹಾಗೆ ವಯಸ್ಸಿಗನುಸಾರ ಬೇರೆ ಬೇರೆ ಸ್ಪರ್ಧೆಗಳನ್ನು ನಡೆಸಲು ಕಾರ್ಯಯೋಜನೆ ರೂಪಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ನಿರಂತರ ಸಭೆ ನಡೆಸಿ: ಆಯಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ತಮ್ಮ ತಮ್ಮ ಹಂತದಲ್ಲಿ ಸಭೆ ನಡೆಸಿ ಸಿದ್ಧತೆಗಳ ಬಗ್ಗೆ ಪರಿಶೀಲಿಸಬೇಕು. ಆಯಾ ಸಮಿತಿಗಳ ಕಾರ್ಯವನ್ನು ಒಪ್ಪಿಸಿದರೆ ನಾವು ಸಹ ಸೇವೆಗೆ ಸಿದ್ಧ ಎನ್ನುವ, ಸ್ವಯಂಪ್ರೇರಿತರಾಗಿ ಕೆಲಸ ಮಾಡಲು ಇಚ್ಛಿಸುವಂತಹ ಸಂಘ ಸಂಸ್ಥೆಗಳ ಸದಸ್ಯರ ಮತ್ತು ಸ್ವಯಂ ಸೇವಕರನ್ನು ಗುರುತಿಸಿ ಅವರ ಸಹಾಯ, ಸಲಹೆ, ಸಹಕಾರ ಮತ್ತು ಸೇವೆ ಪಡೆಯಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಸಮನ್ವಯ ಸಾಧಿಸಿ: ಯಾವುದೇ ಕಾರ್ಯ ಸಾಧನೆಗೆ ಸಮನ್ವಯ ಮುಖ್ಯ. ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಪರಸ್ಪರ ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಬೇಕು.

3ನೇ ಪುಟಕ್ಕೆ

ಗಣರಾಜ್ಯೋತ್ಸವ-ಜಿಲ್ಲಾ ಉತ್ಸವ ಆಚರಣೆ ನಿಮಿತ್ತವಾಗಿ ತಾಲ್ಲೂಕ ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆ

ಜಿಲ್ಲಾ ಉತ್ಸವ ಅದ್ದೂರಿ ಆಚರಣೆಗೆ ಸಕಲ ಸಿದ್ಧತೆ-ಅಶೋಕ ಪವಾರ್



ಸಿರವಾರ,ಜ.14-

ಇದೇ ತಿಂಗಳು ಕೊನೆಯಲ್ಲಿ ಮೂರು ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ಜರುಗುವ ರಾಯಚೂರು ಜಿಲ್ಲಾ ಉತ್ಸವ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ನಡೆಯುತ್ತಿದ್ದು, ತಾಲ್ಲೂಕಿನ ಪ್ರತಿಯೊಬ್ಬರು ಜಿಲ್ಲಾ ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೆ ಕೈ ಜೋಡಿಸಬೇಕು ಎಂದು ತಹಸೀಲ್ದಾರ್ ಅಶೋಕ ಪವಾರ್ ಅವರು ಹೇಳಿದರು.

ಪಟ್ಟಣದ ತಹಸೀಲ್ದಾರ ಕಾರ್ಯಾಲಯದಲ್ಲಿ ಬುಧವಾರ ಆಯೋಜಿದ್ದ ಗಣರಾಜ್ಯೋತ್ಸವ ಆಚರಣೆ ಮತ್ತು ಜಿಲ್ಲಾ ಉತ್ಸವ ಆಚರಣೆಯ ಅಂಗವಾಗಿ ತಾಲ್ಲೂಕ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ರಾಯಚೂರು ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಇದೇ ತಿಂಗಳು 29, 30, 31 ರಂದು ಮೂರು ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ಜರುಗಲಿರುವ ಜಿಲ್ಲಾ ಉತ್ಸವ ಕಾರ್ಯಕ್ರಮದ

3ನೇ ಪುಟಕ್ಕೆ

ಸುಗಮ ಸಂಗೀತ ಕಾರ್ಯಾಗಾರ: ಜನವರಿ 18ರಂದು ರಾಯಚೂರಿನಲ್ಲಿ ಪ್ರತಿಭಾನ್ವೇಷಣೆ-ರಾಜಶೇಖರ



ರಾಯಚೂರು,ಜ.16-

ಸುರಾಗ ಸಂಗೀತ ಅಕಾಡೆಮಿ ಟ್ರಸ್ಟ್ ಹಾಗೂ ರಾಯಚೂರು ಗೆಳೆಯರ ಬಳಗದ ಸಹಯೋಗದಲ್ಲಿ ಸುಗಮ ಸಂಗೀತ ಕಾರ್ಯಾಗಾರ ಹಾಗೂ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಜನವರಿ 18ರಂದು ಬೆಳಗ್ಗೆ10 ಗಂಟೆಯಿಂದ ನಗರದ ಓಂ ಸಾಯಿ ಧ್ಯಾನ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸುರಾಗ ಸಂಗೀತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ರಾಜಶೇಖರ ನುಲಿ ತಿಳಿಸಿದ್ದಾರೆ.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಪ್ರತಿಭಾವಂತ ಗಾಯಕರಿಗೆ ಮತ್ತು ಸಂಗೀತ ಕ್ಷೇತ್ರದಲ್ಲಿ

ಆಸಕ್ತಿ ಹೊಂದಿರುವ ಹೊಸಬರಿಗೆ ಕಲಿಕೆಯ ಅವಕಾಶ ಒದಗಿಸುವ ಜೊತೆಗೆ ಹೊಸ ಗೀತೆಗಳ ಅಭ್ಯಾಸಕ್ಕೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದರು. ಜಿಲ್ಲೆಯ ಗಾಯಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹುಲಿಗೆಪ್ಪ ಜಗ್ಲಿ, ಚಂದ್ರಶೇಖರ ನುಲಿ, ಬಸವಲಿಂಗಪ್ಪ ಹಾಗೂ ಈರಣ್ಣ ನರಸಿಂಹಲು ಉಪಸ್ಥಿತರಿದ್ದರು.

ನರೇಗಾ ಮರಳಿಸಿ, ಉದ್ಯೋಗದ ಹಕ್ಕು ಉಳಿಸಿ: ಶರಣಪ್ರಕಾಶ ಪಾಟೀಲ್ ಆಗ್ರಹ

ರಾಯಚೂರು,ಜ.16-

ನರೇಗಾ ಯೋಜನೆಯನ್ನು ದುರ್ಬಲಗೊಳಿಸುವ ಕೇಂದ್ರ ಸರ್ಕಾರದ ನೀತಿಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಗ್ರಾಮೀಣ ಬಡವರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುವ ಯಾವುದೇ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷ ಖಂಡಿಸುತ್ತದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಪ್ರಕಾಶ ಪಾಟೀಲ್ ಅವರು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.



ನಗರದ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಯುಪಿಎ ಸರ್ಕಾರ ಜಾರಿಗೆ ತಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಗ್ರಾಮೀಣ ಬಡವರ ಬದುಕಿಗೆ ಭದ್ರತೆ ನೀಡಿದ ಮಹತ್ವದ ಕಾಯಿದೆ ಎಂದು ಹೇಳಿದರು.

ನರೇಗಾ ಕಾಯಿದೆಯಡಿ ಗ್ರಾಮೀಣ ಪ್ರದೇಶದ ಪ್ರತಿಯೊಬ್ಬ ಅರ್ಹ ಕುಟುಂಬಕ್ಕೂ ಕನಿಷ್ಠ 100 ದಿನಗಳ ಉದ್ಯೋಗ, ಸಮಯಕ್ಕೆ ಸರಿಯಾದ ಕೂಲಿ, ಪಂಚಾಯಿತಿಗಳಿಗೆ ಅಧಿಕಾರ ಹಾಗೂ ವಿಕೇಂದ್ರಿತ ಆಡಳಿತ ವ್ಯವಸ್ಥೆ ಇತ್ತು. ಕೆಲಸ ಕೇಳಿದ 15 ದಿನಗಳೊಳಗೆ ಉದ್ಯೋಗ ನೀಡದಿದ್ದರೆ ನಿರುದ್ಯೋಗ ಭತ್ಯೆ ನೀಡುವ ವ್ಯವಸ್ಥೆ ಈ ಕಾಯಿದೆಯಲ್ಲಿ ಅಡಕವಾಗಿತ್ತು ಎಂದು ಅವರು ನೆನಪಿಸಿದರು.

2016ರ ಬಳಿಕ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನರೇಗಾ ಯೋಜನೆಯಲ್ಲಿ ನಿರಂತರ ಬದಲಾವಣೆಗಳನ್ನು ಮಾಡಿದ್ದು, ಅದರ ಮೂಲ ಉದ್ದೇಶವನ್ನೇ ಹಾಳು ಮಾಡಿದೆ ಎಂದು ಶರಣಪ್ರಕಾಶ ಪಾಟೀಲ್ ಆರೋಪಿಸಿದರು. ವಿಶೇಷವಾಗಿ ವಿಬಿ ಗ್ರಾಮ್ ಜಿ ಸೇರಿದಂತೆ ಹೊಸ ಮಾರ್ಗಸೂಚಿಗಳಿಂದ ಪಂಚಾಯಿತಿಗಳ ಅಧಿಕಾರ ಕಡಿಮೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಹೆಚ್ಚಳವಾಗುತ್ತಿದೆ ಎಂದರು.

ಕೋವಿಡ್ ಅವಧಿಯಲ್ಲಿ ನರೇಗಾ ಯೋಜನೆ ಗ್ರಾಮೀಣ ಜನರಿಗೆ ಜೀವಾಳವಾಗಿತ್ತು. ಆದರೆ ಈಗ ಕನಿಷ್ಠ ವೇತನದ ಭದ್ರತೆ ಇಲ್ಲದಂತೆ ಮಾಡಿ, ಕಾರ್ಮಿಕರ ಮೇಲೆ ಒತ್ತಡ ಹೆಚ್ಚಿಸಲಾಗುತ್ತಿದೆ. ಇದರಿಂದ ಕಾರ್ಮಿಕ ಶೋಷಣೆ, ಬಲವಂತದ ವಲಸೆ, ಗ್ರಾಮೀಣ ಜೀವನೋಪಾಯಗಳ ಕುಸಿತ ಹಾಗೂ ಗ್ರಾಮೀಣ ಸಂಕಷ್ಟ ಮತ್ತಷ್ಟು ತೀವ್ರಗೊಳ್ಳುವ ಭೀತಿ ಇದೆ ಎಂದು ಎಚ್ಚರಿಸಿದರು.

3ನೇ ಪುಟಕ್ಕೆ

ಬೇವಿನ ಮರದಿಂದ ಹಾಲು ಸೋರುತ್ತಿರುವುದು - ಕಲಾಮಲ ಗ್ರಾಮದಲ್ಲಿ ಪ್ರಕೃತಿಯ ವಿಸ್ಮಯ

ರಾಯಚೂರು,ಜ.16-

ತಾಲೂಕಿನ ಕಲಾಮಲ ಗ್ರಾಮದ ಚನ್ನಬಸವ ನಾಡಗೌಡ ಅವರ ಮನೆಯ ಹತ್ತಿರ ಇರುವ ಬೃಹತ್ ಆಕಾರದ ಬೇವಿನ ಮರದಿಂದ ಕಳೆದ ನಾಲ್ಕು ದಿನಗಳಿಂದ ಹಾಲಿನಂತಿರುವ ದ್ರವ ಸೋರುತ್ತಿರುವುದು ಗ್ರಾಮದಲ್ಲಿ ಕುತೂಹಲ ಮೂಡಿಸಿದೆ. ಮರದ ದಂಡೆ ಹಾಗೂ ಕೊಂಬೆಗಳಲ್ಲಿ ಹಾಲಿನಂತೆ ಕಾಣುವ ದ್ರವ ಹೊರಹೊಮ್ಮುತ್ತಿರುವುದನ್ನು ಕಂಡು ಗ್ರಾಮಸ್ಥರು ಇದನ್ನು ಪ್ರಕೃತಿಯ ವಿಸ್ಮಯವೆಂದು ಪರಿಗಣಿಸುತ್ತಿದ್ದಾರೆ. ಈ ಅಪರೂಪದ ಘಟನೆಯನ್ನು ನೋಡಲು ಕಲಾಮಲ ಗ್ರಾಮ ಮಾತ್ರವಲ್ಲದೆ ಸುತ್ತಮುತ್ತಲ





ಗ್ರಾಮಗಳ ಜನರೂ ಆಗಮಿಸುತ್ತಿದ್ದು, ಹಲವರು ಭಕ್ತಿ ಹಾಗೂ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ. ಕೆಲವರು ಇದನ್ನು ದೈವೀ ಸೂಚನೆ ಎಂದು ನಂಬಿಕೆ ವ್ಯಕ್ತಪಡಿಸಿದರೆ, ಇನ್ನೂ ಕೆಲವರು ವೈಜ್ಞಾನಿಕ ಕಾರಣಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ.

ಈ ಕುರಿತು ಗ್ರಾಮಸ್ಥರಾದ ರಾಜಣ್ಣ ಛಲವಾದಿ ಹಾಗೂ ರುಕ್ಮುದ್ದಿನ್ ಭಾರೆಬೇಲಿ ಅವರು ಪತ್ರಿಕೆಗೆ ಮಾಹಿತಿ ನೀಡಿ, ಬೇವಿನ ಮರದಿಂದ ಹಾಲು ಸೋರುತ್ತಿರುವುದು ಗ್ರಾಮದಲ್ಲಿ ಚರ್ಚೆಯ ವಿಷಯವಾಗಿದೆ. ಜನರು ಇದನ್ನು ಅದ್ಭುತವೆಂದು ಭಾವಿಸುತ್ತಿದ್ದು, ನಿತ್ಯವೂ ಹೆಚ್ಚಿನ ಜನರು ವೀಕ್ಷಣೆಗೆ ಬರುತ್ತಿದ್ದಾರೆ ಎಂದು ತಿಳಿಸಿದರು.

ಮರದಿಂದ ಹೊರಹೊಮ್ಮುತ್ತಿರುವ ದ್ರವದ ಸ್ವಭಾವ ಹಾಗೂ ಕಾರಣಗಳನ್ನು ತಿಳಿಯಲು ಸಂಬಂಧಪಟ್ಟ ಅರಣ್ಯ ಇಲಾಖೆ ಅಥವಾ ತಜ್ಞರು ಪರಿಶೀಲನೆ ನಡೆಸಬೇಕೆಂಬ ಅಭಿಪ್ರಾಯವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ.

ಜ.18ರಂದು ಸಂಕ್ರಾಂತಿ ಸಂಭ್ರಮ-ಪುಸ್ತಕ ಸಂತೆ

ಲವ್ ಯು ಮುದ್ದು' ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ

ರಾಯಚೂರು,ಜ.16-

ನಗರದ ರಂಗಮಂದಿರದಲ್ಲಿ ಜನವರಿ 18ರಂದು (ರವಿವಾರ) ಬೆಳಗ್ಗೆ 10 ಗಂಟೆಯಿಂದ ಸಂಕ್ರಾಂತಿ ಸಂಭ್ರಮ ಹಾಗೂ ಪುಸ್ತಕ ಸಂತೆ ಕಾರ್ಯಕ್ರಮವನ್ನು ಕಲಾ ಸಂಕುಲ ಸಂಸ್ಥೆ ಮತ್ತು ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಚಾರಿಟೇಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಲಾ ಸಂಕುಲ ಸಂಸ್ಥೆಯ ಕಾರ್ಯದರ್ಶಿ ಮಾರುತಿ ಬಡಿಗೇರ ತಿಳಿಸಿದರು.



ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಜ ಪ್ರೇಮಿಗಳ ಕಥೆಯನ್ನು ಆಧರಿಸಿದ ಕನ್ನಡ ಚಲನಚಿತ್ರ ★ಲವ್ ಯು ಮುದ್ದು'★ಗೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಹೇಳಿದರು. ಈ ಚಿತ್ರದ ನಾಯಕ ಸಿದ್ದು ಮೂಲಿ ಮನಿ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದು, ಸೀಟ್ ಎಡ್ಜ್' ಚಿತ್ರದ ನಾಯಕಿ ರವಿಕ್ಷಾ ಶೆಟ್ಟಿ ಸಹ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಹಾಗೂ ವಿಶ್ವ ಕನ್ನಡ ಸಮ್ಮೇಳನ-ದುಬೈ ಅಧ್ಯಕ್ಷ ಶ್ರೀದೇವಿ ಆರ.ವಿ. ನಾಯಕ ಮತ್ತು ನಿರ್ಮಲ ತುಂಗಭದ್ರ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿದ ಎನ್. ಉದಯಕುಮಾರ ಸಿರವಾರ ಅವರಿಗೆ ಗೌರವ ಸನ್ಮಾನ ಮಾಡಲಾಗುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಯಚೂರು ಇವರ ಸಹಕಾರದೊಂದಿಗೆ ವಿವಿಧ ಜಿಲ್ಲೆಗಳ ಹಾಗೂ ಸ್ಥಳೀಯ ಕಲಾವಿದರಿಂದ ಭರತನಾಟ್ಯ, ವಾದ್ಯಗೋಷ್ಠಿ, ಜಾನಪದ ನೃತ್ಯ, ಡೊಳ್ಳು ಕುಣಿತ ಸೇರಿದಂತೆ ಕೊಪ್ಪಳ ಜಿಲ್ಲೆಯ ಲಿಂಗದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಜಾನಪದ ನೃತ್ಯ ಪ್ರದರ್ಶನ ನಡೆಯಲಿದೆ.

3ನೇ ಪುಟಕ್ಕೆ

ಶ್ರೀ ಹಾನಗಲ್ ಕುಮಾರೇಶ್ವರಸ್ವಾಮಿಗಳ ಪುರಾಣ ಪ್ರವಚಣ: ಪ್ರಭಾತ ಸಂಚಲನ

ಬಾಗಲಕೋಟೆ,ಜ.16-

ಯುಗಪುರುಷ ಲಿಂ,ಶ್ರೀ ಕುಮಾರಸ್ವಾಮಿಗಳ 159ನೇ ಜಯಂತಿ, ಬಾಗಲಕೋಟೆಯ ಟೀಕಿನಮಠದ ಶತಾಯುಷಿ ಲಿಂ,ಮಲ್ಲಿಕಾರ್ಜುನ ಮಹಾಸ್ವಾಮಿಗಳ ರಜತ ಪುಣ್ಯಸ್ಮರಣೆ, ಲಿಂ,ಶ್ರೀ ರೇವಣಸಿದ್ದ ಮಹಾಸ್ವಾಮಿಗಳ ದಶಮ ಪುಣ್ಯಸ್ಮರಣೆ ಮತ್ತು ಮಲ್ಲಿಕಾರ್ಜುನ ದೇಶಿಕರ ನಿರನಂಜನ ಪಟ್ಟಾಧಿಕಾರ ಸಮಾರಂಭವನ್ನು ಫೆಬ್ರುವರಿ 6-7-8 ರಂದು ಒಟ್ಟಿಗೆ ಹಮ್ಮಿಕೊಳ್ಳಲಾಗಿದೆ ಎಂದು ಟೆಂಗಿನಮಠ-ಟೀಕಿಮಮಠದ ಶ್ರೀ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಸಮಿತಿಯ ಕಾರ್ಯಾಧ್ಯಕ್ಷಾರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಟೀಕಿನಮಠದಲ್ಲಿ ಬುಧವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಫೆಬ್ರುವರಿ 8 ರಂದು ನಿರಂಜನ ಪಟ್ಟಾಧಿಕಾರ ಕಾರ್ಯಕ್ರಮವವನ್ನು ನೆರವೇರಿಸಲು ಗುರು ಹಿರಿಯರು ನಿರ್ಧರಿಸಿದ್ದು, ಶ್ರೀ ಮಲ್ಲಿಕಾರ್ಜುನ ದೇಶಿಕರ ನಿರಂಜನ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಜನವರಿ ಇದೇ 16 ಗುರುವಾರದಿಂದ ಫೇಬ್ರುವರಿ 5ರ ವರೆಗೆ 21 ದಿನಗಳ ಕಾಲ ಚರಂತಿಮಠದ ಶಿವಾನಂದ ಮಂಟಪದಲ್ಲಿ ಪ್ರತಿ ದಿನ ಸಾಯಂಕಲ 6-30ಕ್ಕೆ ಹಾನಗಲ್ ಕುಮಾರ ಮಹಸ್ವಾಮಿಗಳವರ ಪುರಾಣ ಪ್ರವಚನ ಜರುಗಲಿದೆ, ಫೆಬ್ರುವರಿ 6-7-8 ರಂದು ಮಲ್ಲಿಕಾರ್ಜುನದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಜರುಗಲಿದ್ದು, ಎಲ್ಲ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗುವ ನಿಮಿತ್ಯ ಟೀಕಿನಮಠ ಮಲ್ಲಿಕಾರ್ಜುನ ದೇಶಿಕರ ನಿರಂಜನ ಪಟ್ಟಾಧಿಕಾರಿ ಮಹೋತ್ಸವ ಸಮಿತಿಯನ್ನು ರಚಿಸಿಲಾಗಿದೆ,

ಅದು ಗೌರವಾಧ್ಯಕ್ಷರಾಗಿ ಬಾಗಲಕೊಟೆ ಚರಂತಿಮಠ ಪ್ರಭುಸ್ವಾಮಿಗಳು, ಗೌರವ ಉಪಾಧ್ಯಕ್ಷರುಗಳಾಗಿ ಕೋಟೆಕಲ್ ಕಮತಗಿಯ ಶ್ರೀ ಹೊಳೆಹುಚ್ಚೇಶ್ವರಸ್ವಾಮಿಗಳು, ಅಮೀನಗಡದ ಶಂಕರರಾಜೇಂದ್ರಸ್ವಾಮಿಗಳು, ಗುಳೆದಗುಡ್ಡದ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು, ಕೆರೂರಿನ ಡಾ.ಶಿವಕುಮಾರ ಶಿವಾಚಾರ್ಯಸ್ವಾಮಿಗಳು, ಬಿಳಗಿಯ ಗುರುಪಾದ ಶಿವಾಚಾರ್ಯಸ್ವಾಮಿಗಳು, ಗುಳೆದಗುಡ್ಡದ ಶ್ರೀ ನೀಲಕಂಠಶಿವಾಚಾರ್ಯ ಸ್ವಾಮಿಗಳು. ಇನ್ನು ಅಧ್ಯಕ್ಷರಾಗಿ ಲೋಕಸಭಾ ಸದಸ್ಯರಾದ ಪಿ.ಸಿ.ಗದ್ದಿಗೌಡರ, ಉಪಾಧ್ಯಕ್ಷರಾಗಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ್, ವಿಧಾನ ಪರಿಷತ್ ಸದಸ್ಯ ನಾರಾಯಣಸಾ ಭಾಂಡಗೆ, ಬಸವೇಶ್ವರ ಬ್ಯಾಂಕಿನ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಸಮೀತಿಯ ಕಾರ್ಯಾಧ್ಯಕ್ಷರಾಗಿ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ, ಉಪಕಾರ್ಯಾಧ್ಯಕ್ಷರಾಗಿ ಮಹೇಶ ಅಥಣಿ, ಬಸವಪ್ರಭು ಸರನಾಡಗೌಡ, ಕೋಶಾಧ್ಯಕ್ಷರಾಗಿ ವಿಜಯಕುಮಾರ ಅಂಗಡಿ, ಪ್ರಧಾನ ಕಾರ್ಯದಶಿಗಳಾಗಿ ಅಭಾವೀಲಿಂ ಮಹಾಸಭಾ ಜಿಲ್ಲಾಧ್ಯಕ್ಷರಾದ ಜಿ.ಎನ್.ಪಾಟೀಲ, ಕಾರ್ಯದರ್ಶಿಗಳಾಗಿ ಚಂದ್ರಶೇಖರ ಶೆಟ್ಟರ್, ಬಸವರಾಜ



ಭಗವತಿ,ಎಸ್.ಪಾವಟರ, ಬಸವರಾಜ ಮುಕ್ಕುಪ್ಪಿ ಅವರನ್ನು ನೇಮಿಸಲಾಗಿದ್ದು, ಇನ್ನು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಅದರಲ್ಲಿ ಹಣಕಾಸು ಸಮಿತಿ- ವಿಜಯಕುಮಾರ ಅಂಗಡಿ, ದಾಸೋಹ ಸಮೀತಿ- ಕುಮಾರಸ್ವಾಮಿ ಹಿರೇಮಠ, ಪ್ರವಚನ ಸೇವಾ ಸಮಿತಿ- ಪ್ರಕಾಶ ರೇವಡಿಗಾರ, ಪ್ರಚಾರ ಸಮಿತಿ- ಮಹಾಂತೇಶ ಶೆಟ್ಟರ. ಪೂಜ್ಯ ಶ್ರೀಗಳ ವ್ಯವಸ್ಥಾಪಕ ಸಮಿತಿ- ಪ್ರಭಯ್ಯಾ ಸರಗಣಾಚಾರಿ, ಸಾಂಸ್ಕೃತಿಕ ಹಾಗೂ ಸ್ವಯಂ ಸೇವಾ ಸಮಿತಿ ಗುರುಬಸಯ್ಯಾ ಸೂಳಿಬಾವಿ, ವೇದಿಕೆ/ಅತಿಥಿ ಸತ್ಕಾರ ಸಮಿತಿ- ಅಶೋಕ ಸಜ್ಜನ, ಉತ್ಸವ(ಮೇರವಣಿಗೆ)ಸಮೀತಿ- ಮಲ್ಲಿಕಾರ್ಜುನ ಸಾಸನೂರ, ಮಹಿಳಾ ಸಮಿತಿ- ನಿರ್ಮಲಾ ಹಲಕುರ್ಕಿ ಈ ರೀತಿಯಾಗಿ 9 ಸಮಿತಿಗಳನ್ನು ರಚಿಸಲಾಗಿದೆ, ಪ್ರತಿ ಸಮಿತಿಯಲ್ಲಿ ಅನೇಕ ಸೇವಾಸಕ್ತರು ಸದಸ್ಯರುಗಳಾಗಿ ಸೇವಾನೀರತರಾಗಿರುತ್ತಾರೆ ಎಂದರು.

ಇದೇ ದಿನಾಂಕ 16 ರಂದು ಶುಕ್ರವಾರ ನಡೆಯಲಿರುವ ಪುರಾಣ ಪ್ರವಚನದ ಪ್ರಾರಂಭೋತ್ಸವ ಜರುಗಲಿದ್ದು ಸಮಾರಂಭ ದಿವ್ಯಸಾನಿದ್ಯವನ್ನು ಚರಂತಿಮಠದ ಪ್ರಭುಸ್ವಾಮಿಗಳು ವಹಸಿಲಿದ್ದಾರೆ, ಶಿವಯೋಗಮಂದಿರದ ಉಪಾಧ್ಯಕ್ಷರು, ಹಾವೇರಿ ಹುಕ್ಕೇರಿಮಠದ ಸದಾಶಿವ ಮಹಾಸ್ವಾಮಿಗಳು ನೇತೃತ್ವ ವಹಿಸಿ ಪ್ರವಚನಕ್ಕೆ ಚಾಲನೆ ನೀಡುವರು, 21ದಿನಗಳ ಕಾಲ ಹಾವೇರಿಯ ಅಕ್ಕಿಮಠದ ಗುರುಲಿಂಗಮಹಾಸ್ವಾಮಿಗಳು ಪ್ರವಚನ ನೀಡಲಿದ್ದಾರೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮತಿಯ ಕಾರ್ಯಾದ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ವಹಿಸಲಿದ್ದು, ಇದೇ ಸಂದರ್ಭದಲ್ಲಿ ಅಮೀನಗಡದ ಸಾಹಿತಿ ಲೇಖಕರಾದ ಎಚ್.ಬಿ.ರಂಗಾಪುರ ಇವರು ರಚನೆಯ ಬಾಗಲಕೋಟೆಯ ಟೀಕಿನಮಠ-ಟೆಂಗಿನಮಠ ಪರಂಪರೆ ಎಂಬ ನೂತನ ಕೃತಿಯನ್ನು ಗುಳೆದಗುಡ್ಡದ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಬಿಡುಗಡೆಗೊಳಿಸಲಿದ್ದಾರೆ, ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಕೃತಿ ಪರಿಚಯ ಮಾಡಲಿದ್ದಾರೆ, ಗ್ರಂಥದಾನಿಗಳಾದ ಶ್ರೀಮತಿ ಪಾರ್ವತಮ್ಮ ಬಳೂಲಮಠ, ಶಶಿಕಲಾ ಬಳೂಲಮಠ, ಲೇಖಕ ಎಚ.ಟಿ.ರಂಗಾಪುರ ಇವರು ಉಪಸ್ಥಿತರಿರುತ್ತಾರೆ, 21 ದಿನಗಳ ಪ್ರವಚನ ಸಂದರ್ಭದಲ್ಲಿ ಎರಕಿಹಾಳದ ದೇವರಾಜ ಗವಾಯಿಗಳು ಹಾರ್ಮೋನಿಯಮ್ ಹಾಗೂ ಗಾಯನ ಮತ್ತು ಕೊಡೆಕಲ್ ನ ಸುರೇಶಕುಮಾರ ಹುಗಾರ ತಬಲಾ ಸಾಥ ನೀಡಲಿದ್ದಾರೆ,

ಪ್ರಭಾತ ಸಂಚಲನ: ಪೂಜ್ಯ ಸಾಮಿಗಳ ನೇತೃತ್ವದಲ್ಲಿ ಹಿರಯರು-ಕಿರಿಯರು ಒಡಗೂಡಿ ದಿನಾಂಕ 16 ರಿಂದ ಪೇಬ್ರುವರಿ 5 ರವರೆಗೆ ದಿನಾಲೂ ಪ್ರಾತ;ಕಾಲ 6-30 ರಿಂದ 8 ಗಂಟೆ ವರೆಗೆ ಪ್ರಭಾತ ಸಂಚಲನ ಜರುಗಲಿದ್ದು, 7 ದಿನ ಬಾಗಲಕೋಟೆಯ ಹಳೆ ಪ್ರದೇಶಗಳಲ್ಲಿ, 7 ದಿನ ವಿದ್ಯಾಗಿರಿ ಹಾಗೂ ಇನ್ನು 7 ದಿನ ನವನಗರ ಪ್ರದೇಶಗಳಲ್ಲಿ ಪ್ರಭಾತ ಸಂಚಲನ ಜರುಗಲಿದೆ.

ಈ ಎಲ್ಲ ಕಾರ್ಯಕ್ರಮದಲ್ಲಿ ಎಲ್ಲರು ತಮ್ಮ ತನುಮನದಿಂದ ಭಾಗವಹಿಸಿ ಯಶಸ್ವಿಗೊಳಿಸುವಂತೆ ವಿನಂತಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೋಟೆಕಲ್-ಕಮತಗಿಯ ಹೊಳೆ ಹುಚ್ಚೇಶ್ವರಸ್ವಾಮಿಗಳು, ಗುಳೇದಗುಡ್ಡದ ಅಭಿನವ ಒಪ್ಪತ್ತೇಶ್ವರಸ್ವಾಮಿಗಳು. ಬೆಳಗಾವಿ ಕಾರಂಜಿಮಠದ ಶಿವಯೋಗಿದೇವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಜಿ.ಎನ್.ಪಾಟೀಲ, ಸಂಘದ ಗೌರವ ಕಾರ್ಯಧರ್ಶಿ ಮಹೇಶ ಅಥಣಿ ಇದ್ದರು.

ಕನಿಷ್ಠ ಬೆಂಬಲ ಯೋಜನೆಯಡಿ ಬಿಳಿ ಜೋಳ ಖರೀದಿ

ಬಳ್ಳಾರಿ,ಜ.16-

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025-26 ನೇ ಸಾಲಿನ ಮುಂಗಾರು ಋತುವಿನ ಬಿಳಿ ಜೋಳವನ್ನು ರೈತರಿಂದ ನೇರವಾಗಿ ಖರೀದಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಸರ್ಕಾರದ ಆದೇಶ ದಂತೆ ಬೆಂಬಲ ಬೆಲೆ ಯೋಜನೆಯಡಿ ಜೋಳವನ್ನು ಮಾರಾಟ ಮಾಡಲು ರೈತರು ಮೊದಲು ಕೃಷಿ ಇಲಾಖೆ ಯಲ್ಲಿ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನಂತರ ಆಯಾ ತಾಲ್ಲೂಕುಗಳ ಕೃಷಿ ಉತ್ಪನ್ನ ಮಾರುಕಟ್ಟೆ, ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ತಾಲ್ಲೂಕು ಕೇಂದ್ರ ಕಚೇರಿ ಗಳಲ್ಲಿ ತೆರೆಯಲಾಗುವ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟ ಮಾಡಲು ನೋಂದಾಯಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ. ಈಗಾಗಲೇ 2025-26 ನೇ ಸಾಲಿನ ಮುಂಗಾರು ಋತುವಿನ ಬಿಳಿಜೋಳ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ.

★ಬೆಂಬಲ ಬೆಲೆ:★ ಬಿಳಿ ಜೋಳ-ಹೈಬ್ರೀಡ್ : ರೂ.3,699 (ಪ್ರತಿ ಕ್ವಿಂ) ಬಿಳಿ ಜೋಳ-ಮಾಲ್ದಂಡಿ : ರೂ.3,749 (ಪ್ರತಿ ಕ್ವಿಂ) ★ಖರೀದಿ ಕೇಂದ್ರಗಳ ವಿವರ:★

ಬಳ್ಳಾರಿ ತಾಲ್ಲೂಕಿನ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘ, ಬಳ್ಳಾರಿ ಮತ್ತು ಮೋಕಾ, ಅಸುಂಡಿ, ರೂಪನಗುಡಿ, ಅಮರಾಪುರ ಗ್ರಾಮಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ.

ಕುರುಗೋಡು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ. ಸಿರುಗುಪ್ಪ ತಾಲ್ಲೂಕಿನ ಕೆ.ಬೆಳಗಲ್ಲು, ಕರೂರು, ಹಚ್ಚೊಳ್ಳಿ, ಬೂದುಗುಪ್ಪ, ಬಿ.ಎಂ.ಸೂಗೂರು, ತಾಳೂರು, ಮುದ್ದಟನೂರು, ಅರಳಿಗನೂರು, ಸಿರಿಗೇರಿ ಗ್ರಾಮಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ. ಕಂಪ್ಲಿ ತಾಲ್ಲೂಕಿನ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘ, ಕಂಪ್ಲಿ ಮತ್ತು ಎಮ್ಮಿಗನೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ. ರೈತರು ಮೇಲ್ಕಂಡ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಕೃಷಿ ಇಲಾಖೆಯಿಂದ ಪಡೆದಿರುವ ಫ್ರೂಟ್ಸ್ ಐ.ಡಿ ಮತ್ತು ಆಧಾರ್ ನೊಂದಿಗೆ ನೋಂದಣಿ ಮಾಡಿಕೊಳ್ಳಬೇಕು. ಬಿಳಿಜೋಳ /ಬೀಜೋತ್ಪಾದನೆ ಬೆಳೆಗಳನ್ನು ಬೆಳೆದಿದ್ದು, ಜೋಳವೆಂದು ನಮೂದಿಸಿಕೊಂಡು ಜೋಳ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿದಲ್ಲಿ ಅಥವಾ ಅಕ್ರಮ ಜೋಳ ನೋಂದಣಿ ಮಾಡಿದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕುಗಳ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಾದಗಿರಿ ಜಿಲ್ಲೆಯ ಮೈಲಾಪುರ ಗ್ರಾಮದ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಉಚಿತ ಕಾನೂನು ಸಲಹಾ ಕೇಂದ್ರ ಆರಂಭ

ಯಾದಗಿರಿ,ಜ.16-

ಯಾದಗಿರಿ ಜಿಲ್ಲೆಯ ಮೈಲಾಪುರ ಗ್ರಾಮದ ಇಂದು ಜ.14ರ ಬುಧವಾರ ರಂದು ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಉಚಿತ ಕಾನೂನು ಸಲಹಾ ಕೇಂದ್ರ ಪ್ರಾರಂಭಿಸಿದ್ದು, ಸದರಿ ಕೇಂದ್ರಕ್ಕೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಗೌರವಾನ್ವಿತ ಶ್ರೀ ಶಿವರಾಜ್.ವಿ.ಪಾಟೀಲ್ ನ್ಯಾಯಮೂರ್ತಿಗಳು ನೆರೆದಿದ್ದ ಜನರಿಗೆ ಪ್ರಾಧಿಕಾರದ ವಿವಿಧ ಯೋಜನೆಗಳ ಕರ ಪತ್ರಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು.

ಜಾತ್ರೆಯ ಅಂಗವಾಗಿ ಜಾತ್ರೆಯಲ್ಲಿ ಸೇರುವ ಜನರಿಗೆ ಕಾನೂನು ಅರಿವು ಮೂಡಿಸುವದರ ಸಲುವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ಶ್ರೀ ಮರುಳಾಸಿದ್ದಾರಾಧ್ಯಾ ಹೆಚ್.ಜೆ ಅವರ ನಿರ್ದೇಶನದಂತೆ ಉಚಿತ ಕಾನೂನು ಸಲಹಾ ಕೇಂದ್ರವನ್ನು ಪ್ರಾರಂಭಿಸಲು ಯೋಜಿಸಲಾಗಿತ್ತು.

ಜಾತ್ರೆಯಲ್ಲಿ ನೆರೆದಿದ್ದ ಜನರಿಗೆ NALSAದ ವಿವಿಧ ಯೋಜನೆಗಳ ಕರಪತ್ರಗಳನ್ನು ಮತ್ತು KSLSA ದಿಂದ ಪ್ರಕಟವಾದ ಪುಸ್ತಕಗಳನ್ನು ವಿತರಿಸಲಾಯಿತು.

ಬಾಲ್ಯ ವಿವಾಹ ನಿಷೇಧ ಕಾಯ್ದೆ, ಖಾಯಂ ಜನತಾ ನ್ಯಾಯಾಲಯ ಮತ್ತು ರಾಷ್ಟ್ರೀಯ ಲೋಕ್ ಅದಾಲತ್ ಕುರಿತು ಧ್ವನಿಮುದ್ರಿಕೆಗಳ ಮೂಲಕ ಪ್ರಚುರಪಡಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ಶ್ರೀ ಮರಿಯಪ್ಪ, ಹಾಗೂ ಪ್ರಾಧಿಕಾರದ ಸಿಬ್ಬಂದಿಗಳು ಹಾಗೂ ಕಾನೂನು ಸ್ವಯಂ ಸೇವಕರು ಪ್ರಾಧಿಕಾರದ ಕರ ಪತ್ರಗಳನ್ನು ಹಾಗೂ ಪುಸ್ತಕಗಳನ್ನು ವಿತರಿಸಿದರು ಅಲ್ಲದೆ ಕೇಂದ್ರಕ್ಕೆ ಭೇಟಿ ನೀಡಿದ ಜನರಿಗೆ ವಿವಿಧ ಕಾನೂನುಗಳ ಕುರಿತು ಮಾಹಿತಿ ನೀಡಿದರು.

ಬಳ್ಳಾರಿಯಲ್ಲಿ ಸಂಭ್ರಮದ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯೋತ್ಸವ

ಎಲ್ಲ ಸಮಾಜದ ಏಳ್ಗಿಗೆ ನಮ್ಮ ಸರ್ಕಾರ ಬದ್ಧ: ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್

ಬಳ್ಳಾರಿ,ಜ.16-

ರಾಜ್ಯದ ಪ್ರತಿ ಸಮಾಜ, ಸಮುದಾಯಗಳ ಅಭಿವೃದ್ದಿಗೆ ನಮ್ಮ ಸರ್ಕಾರ ಬದ್ದವಾಗಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಶಿವಯೋಗಿ ಸಿದ್ದರಾಮೇಶ್ವರರ 854ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿನ ಎಲ್ಲಾ ಹಿಂದುಳಿದ ವರ್ಗಗಳು, ಬಡವರು ಅಭಿವೃದ್ಧಿ ಹೊಂದಬೇಕು ಎಂಬುದೇ ನಮ್ಮ ಸರ್ಕಾರದ ಮುಖ್ಯ ಆಶಯವಾಗಿದೆ ಎಂದು ಪ್ರತಿಪಾದಿಸಿದ ಸಚಿವರು, ಸಿದ್ದರಾಮೇಶ್ವರರು ಭಕ್ತಿ, ಯೋಗ ಮತ್ತು ಸೇವೆಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದು ತಿಳಿಸಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲ್ಲು ಹೊಡೆಯುವ ವೃತ್ತಿಯಿಂದಲೇ ತಮ್ಮ ಬದುಕು ಕಟ್ಟಿಕೊಂಡವರು ಭೋವಿ ಸಮಾಜದವರು. ಸಮಾಜದ ಅಭಿವೃದ್ದಿಗೆ ಸದಾ ಬದ್ದನಾಗಿದ್ದು, ನಗರದಲ್ಲಿ ಭೋವಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಸುವರ್ಣ ಬಳ್ಳಾರಿ ನಗರ ಕಟ್ಟಲು ಶ್ರಮಿಸುವೆ ಎಂದು ಭರವಸೆ ನೀಡಿದರು.

ಸಂಸದ ಈ.ತುಕಾರಾಮ್ ಅವರು ಮಾತನಾಡಿ, ಶಿವಶರಣರ ಜೀವನ ಚರಿತ್ರೆ, ಆಚಾರ-ವಿಚಾರಗಳನ್ನು ಈಗಿನ ಪೀಳಿಗೆಗೆ ಮನದಟ್ಟು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಯಂತಿ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ. ಒಬ್ಬ ಮನುಷ್ಯ ನಿರ್ದಿಷ್ಟ ಗುರಿ



ಇಟ್ಟುಕೊಂಡು ಸತ್ಯ, ನ್ಯಾಯ ಪಾಲಿಸಿಕೊಂಡು ವಿಜಯೋತ್ಸವದೆಡೆಗೆ ಸಾಗಬೇಕು ಎಂಬುದನ್ನು ಬಿಂಬಿಸುವುದೇ ಜಯಂತಿ ಕಾರ್ಯಕ್ರಮಗಳ ಆಚರಣೆಯ ಮುಖ್ಯ ಉದ್ದೇಶವಾಗಿವೆ ಎಂದು ಹೇಳಿದರು.

ಸಾರ್ವಜನಿಕರು ಪ್ರಜ್ಞಾವಂತರಾಗಿ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಸಾಮಾಜಿಕ, ಆರ್ಥಿಕವಾಗಿ ಸಬಲರಾಗಬೇಕು. ಭೋವಿ ಸಮಾಜದವರು ಕಾಯಕಯೋಗಿಗಳು. ಮನೆ ಕಟ್ಟುವವರಾದರೂ ಆರೋಗ್ಯವಂತ ಸಮಾಜ ಕಟ್ಟಲು ಸಹ ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿರುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಸಹ ಅನುಷ್ಠಾನಗೊಳಿಸುತ್ತಿದೆ. ಹೊಸ ವರ್ಷದ ಮಕರ ಸಂಕ್ರಾಂತಿ ಹಬ್ಬದೊಂದಿಗೆ ಹೊಸ ಹುರುಪಿನೊಂದಿಗೆ ಸಾಗೋಣ ಎಂದು ಆಶಯ ವ್ಯಕ್ತಪಡಿಸಿದರು.

ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ್ ಅವರು ಮಾತನಾಡಿ, ಶಿವಯೋಗಿ ಸಿದ್ದರಾಮೇಶ್ವರರು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವಿಶ್ವಗುರು ಬಸವಣ್ಣನವರ ಕಾಲಘಟ್ಟದ ಅನುಭವ ಮಂಟಪದಲ್ಲಿ ಅಭಿವೃದ್ಧಿ ಕೆಲಸದಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಭೋವಿ ಸಮಾಜವು ಹಿಂದುಳಿದ ಸಮಾಜವಾಗಿದ್ದು, ರಾಜಕೀಯ, ಆರ್ಥಿಕವಾಗಿ ಅವರನ್ನು ಮುನ್ನೆಲೆಗೆ ತರುವ ಕೆಲಸ ನಮ್ಮ ಸರ್ಕಾರ ಮಾಡಲಿದೆ ಎಂದರು.

ಶಿಕ್ಷಣವೇ ಆಯುಧ. ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಮುಖ್ಯ ಗುರಿಯಾಗಿಸಬೇಕು. ಮಕ್ಕಳ ಭವಿಷ್ಯ ರೂಪಿಸುವ ಕೆಲಸ ಮಾಡಬೇಕು ಎಂದು ಹೇಳಿದ ಅವರು, ಕಂಪ್ಲಿ ಕ್ಷೇತ್ರದ ಕುರುಗೋಡು ಪಟ್ಟಣದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಭೋವಿ ಸಮಾಜದ ಸಮುದಾಯ ಭವನ ನಿರ್ಮಿಸಲಾಗುತ್ತಿದ್ದು, ಈಗಾಗಲೇ 50 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಬಳ್ಳಾರಿಯ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂ ಭಾಷಾ ಅವರು ವಿಶೇಷ ಉಪನ್ಯಾಸ ನೀಡಿ, ಅನೇಕ ಶರಣರ ವಚನ ಸಾಹಿತ್ಯದಿಂದ ಜೀವನ ಶೈಲಿಯೇ ಬದಲಾಯಿಸಿದ 12 ನೇ ಶತಮಾನದ ಅದ್ವಿತಿಯ ಕಾಲದಲ್ಲಿದ್ದವರು ಶಿವಯೋಗಿ ಸಿದ್ಧರಾಮೇಶ್ವರರು. ನಮ್ಮನ್ನು ನಾವು ಅರಿತುಕೊಂಡಾಗ ಮಾತ್ರ ಶರಣರನ್ನು ಅರಿಯಲು ಸಾಧ್ಯವಾಗಲಿದೆ ಎಂದು ಹೇಳಿದರು.

ಶಿವಯೋಗಿ ಸಿದ್ಧರಾಮೇಶ್ವರರು ಒಬ್ಬ ಮಹಾನ್ ವಚನಕಾರ ಮತ್ತು ಕರ್ಮಯೋಗಿ. ಇವರು ಮಹಾರಾಷ್ಟ್ರದ ಸೊಲ್ಲಾಪರ (ಸೊನ್ನಲಗಿ) ಜಿಲ್ಲೆಯ ಮುಧಗಿ ಎಂಬಲ್ಲಿ ಜನಿಸಿದರು. ಬಾಲ್ಯದಿಂದಲೇ ಭಕ್ತಿ, ಕಾಯಕ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಕೆರೆಗಳ ನಿರ್ಮಾಣ, ಲಿಂಗ ಪ್ರತಿಷ್ಠಾಪನೆ ಮತ್ತು ಅನುಭವ ಮಂಟಪದಲ್ಲಿ ಪಾಲ್ಗೊಂಡು ಶಿವಯೋಗ ಸಾಧಿಸಿ, ಸಾರ್ವಜನಿಕ ಸೇವೆಗಾಗಿ ತಮ್ಮನ್ನು ತಾವು ಅರ್ಪಿಸಿದ ಮಹಾತ್ಮರಾಗಿದ್ದವರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಂದ್ಯಾಳಿನ ಜಿ.ಪಿ.ಸಾಯಿಶೃತಿ ಅವರು ಭಕ್ತಿ ಸಂಗೀತ ಪ್ರಸ್ತುತಪಡಿಸಿದರು.

ಅದ್ದೂರಿ ಮೆರವಣಿಗೆ: ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ಪುಷ್ಪಾರ್ಚನೆಗೈಯುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾದ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರ ಒಳಗೊಂಡ ಬೆಳ್ಳಿರಥದ ಮೆರವಣಿಗೆಯು ನಗರದ ಗಡಿಗಿ ಚೆನ್ನಪ್ಪ ವೃತ್ತ- ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ-ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಸಾಗಿಬಂದು ಸಂಪನ್ನಗೊಂಡಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಭೋವಿ (ವಡ್ಡರ) ಸಂಘದ ಅಧ್ಯಕ್ಷ ವಿ.ರಾಮಾಂಜನೇಯ, ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಸಮಾಜದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

ಭೋವಿ ವಡ್ಡರ ಸಮಾಜದ ಬೆಳವಣಿಗೆ 5 ಲಕ್ಷ ರೂ ನೀಡಲು ಬದ್ಧ- ಶಾಸಕ: ತಿಪ್ಪಣ್ಣಪ್ಪ ಕಮಕನೂರ


ಕಲಬುರಗಿ, ಜ.16-

ಭೋವಿ ಸಮಾಜ ಬೆಳವಣಿಗೆಗಾಗಿ 5 ಲಕ್ಷ ರೂ ಸಹಾಯ ನೀಡಲು ನಾನು ಬದ್ದನಾಗಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ ಅವರು ಹೇಳಿದರು.

ಬುಧುವಾರದಂದು ನಗರದ ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಸಿದ್ದರಾಮೇಶ್ವರ ಜಯಂತಿಯನ್ನು ನಾವು ಇಂದು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಅವರ ಜೀವನವು ನಮಗೆ ಪ್ರೇರಣೆದಾಯಕವಾಗಿದೆ ಅವರು ಸಮಾಜಕ್ಕೆ ಧರ್ಮ ಸೇವೆ ಮತ್ತು ಶ್ರದ್ದೆಯ ತತ್ವಗಳನ್ನು ಅರ್ಥ ಮಾಡಿಸಿದರು. 12ನೇ ಶತಮಾನದವರಾದ ಸಿದ್ಧರಾಮೇಶ್ವರರು ಆಧ್ಯಾತ್ಮಿಕ ಆಗಿರದೆ, ಲೋಕೋಪಕಾರಿಗಳಾಗಿದ್ದರು, ದೊಡ್ಡ ಕೆರೆಯನ್ನು ನಿರ್ಮಿಸಿದರು, ಸಮಾಜ ಸೇವೆ ಮಾರ್ಗದಲ್ಲಿ ದೈವತ್ವನ್ನು ಕಂಡುಕೊಂಡವರು,

ಚನ್ನಬಸವಣ್ಣ ಅವರನ್ನು ತಮ್ಮ ಗುರುವಾಗಿಸಿಕೊಂಡರು. ಹೀಗೆ ಜೀವನದ ಬಗ್ಗೆ ತಿಳಿಸುವುದರ ಮುಖಾಂತರ ನಿಮ್ಮ ಸಹಾಯಕ್ಕೆ, ಸಹಕಾರಕ್ಕೆ ನಿಮ್ಮ ಬೆನ್ನುಲುಬಾಗಿ ಇಲ್ಲಿರುತ್ತೇನೆ ಎಂದು ಹೇಳಿದರು



ದಕ್ಷಿಣ ಮತ ಕ್ಷೇತ್ರದ ಶಾಸಕರಾದ ಅಲ್ಲಮ್‌ಪ್ರಭು ಪಾಟೀಲ ಅವರು ಮಾತನಾಡಿ, ಸಿದ್ದರಾಮೇಶ್ವರ ಅವರ ತಂದೆ ತಾಯಿಗಳು ಕಾಯಕಜೀವಿಗಳು ಭಗವಂತನ ಪ್ರೇರಣೆ ಪಡೆದವರು, ಮಲ್ಲಿಕಾರ್ಜುನ ಧ್ಯಾನ ಮಾಡಿದವರು ಪರಮಾತ್ಮ ರೂಪವನ್ನು ಪಡೆದ ರೇವಣಸಿದ್ದೇಶ್ವರರ ಆಶೀರ್ವಾದದಿಂದಾಗಿ ಸಿದ್ಧರಾಮೇಶ್ವರರು ಜನಿಸಿದರು ಎಂದು ಹೇಳಿದರು.

ಕಾಯಕವೇ ಕೈಲಾಸ ಎಂದುಕೊಂಡ ಸಿದ್ದರಾಮೇಶ್ವರರು ಮಾದರಿಯಾಗಿ, ಸಾಹಿತಿಯಾಗಿ, ವಚನಕಾರರಾಗಿ, ಸಮಾಜ ಸುಧಾರಕರಾಗಿ ಅತ್ಯಂತ ಹೆಸರುವಾಸಿಯಾಗಿ ಸೊಲ್ಲಾಪುರದಲ್ಲಿ ಸಿದ್ದರಾಮೇಶ್ವರರು ದೇವರ ಅವತಾರ್ ಎಂತಿದ್ದಾರೆ. ಅವರ ನಡೆ ನುಡಿ ಆಚಾರ ವಾಚನಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸಬೇಕೆಂದು ಹೇಳಿದರು.


ಜಿಲ್ಲಾ ಬೋವಿ ವಡ್ಡರ್ ಸಮಾಜದ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಬಿ ಕುಸ್ತಿ ಮಾತನಾಡಿ, ಕಾಂಗ್ರೆಸ್ ಸರ್ಕಾರದಿಂದ ನಮ್ಮ ಸಮಾಜದ ಭವ್ಯವಾದ ಭವನ ಕಟ್ಟಲಿಕೆ 5 ಕೋಟಿ ಬಿಡುಗಡೆ ಆಗಿದೆ, ಇನ್ನು ಉಳಿದ ಹಣ ನೀಡಿ ಸಹಕಾರ ನೀಡಬೇಕೆಂದು ಶಾಸಕರಲ್ಲಿ ಮನವಿ ಮಾಡಿದರು.

ಶ್ರೀ ಸಿದ್ದರಾಮೇಶ್ವರ ಸರ್ಕಾರಿ ಅರೆ ಸರ್ಕಾರಿ ಹಾಗೂ ನಿವೃತ್ತ ನೌಕರರ ಸಂಘದ ಅಧ್ಯಕ್ಷರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಶರಣಪ್ಪ ಗುಂಡುಗುರ್ತಿ ವಿಶೇಷ ಉಪನ್ಯಾಸ ನೀಡಿ ಸಿದ್ದರಾಮೇಶ್ವರ ಜನ್ಮದ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಸ್ವಾಗತಿಸಿದರು.

ವೇದಿಕೆ ಮೇಲೆ ಅಪರ ಜಿಲ್ಲಾಧಿಕಾರಿಯಾದ ರಾಯಪ್ಪ ಹುಣಸಿಗಿ, ಜಿಲ್ಲಾಧಿಕಾರಿ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ, ಮಹಾನಗರ ಪಾಲಿಕೆ ಸದಸ್ಯರಾದ ಹೊನ್ನಮ್ಮ ಹಾಗರಗಿ, ತಿಪ್ಪಣ್ಣ ಒಡೆಯರ್, ಜಯಂತಿ ಜಿಲ್ಲಾಧ್ಯಕ್ಷರು ಸಂಜಯ್ ಮಂಜುಳಕರ್, ಗ್ಯಾರೆಂಟಿ ಯೋಜನೆ ಸದಸ್ಯ ರಾಜು ಗುತ್ತೇದಾರ್ ಆಂದೋಲ ಹಾಗೂ ಬೋವಿ ಸಮಾಜದ ಮುಖಂಡರು ಇನ್ನಿತರರು ಉಪಸ್ಥಿತರಿದ್ದರು.

ವಾಹನಗಳಿಗೂ ರಾಷ್ಟ್ರಧ್ವಜ ಅಳವಡಿಸಿ ಸಂಭ್ರಮಿಸಿ-ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್

ಬಳ್ಳಾರಿ,ಜ.16-



ಗಣರಾಜ್ಯೋತ್ಸವದ ಅಂಗವಾಗಿ ವಾಹನಗಳಿಗೂ ಕೂಡ ಧ್ವಜಸಂಹಿತೆ ಪಾಲಿಸಿಕೊಂಡು, ರಾಷ್ಟ್ರ ಧ್ವಜವನ್ನು ಅಳವಡಿಸಿ, ಸಂಭ್ರಮಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸ್ಪಷ್ಟನೆ ನೀಡಿದ್ದಾರೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ವಾಹನಗಳಿಗೆ ರಾಷ್ಟ್ರ ಧ್ವಜ ಕಟ್ಟಲು ನಿರ್ಬಂಧಿಸಲಾಗಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿ ಪ್ರಕಟಗೊಂಡಿದ್ದು, ವಾಹನಗಳಿಗೆ ರಾಷ್ಟ್ರ ಧ್ವಜ ಕಟ್ಟಲು ಯಾವುದೇ ನಿರ್ಬಂಧ ವಿಧಿಸಿಲ್ಲ. ಆದರೆ ಧ್ವಜ ಸಂಹಿತೆ ಪಾಲಿಸದೆ ರಾಷ್ಟ್ರ ಧ್ವಜಕ್ಕೆ ಅವಮಾನವಾಗುವ ರೀತಿಯಲ್ಲಿ ಯಾರೂ ಕೂಡ ರಾಷ್ಟ್ರ ಧ್ವಜ ಬಳಸಬಾರದು. ರಾಷ್ಟ್ರದ ತ್ರಿವರ್ಣ ಧ್ವಜಗಳನ್ನು ಬಳಸುವಲ್ಲಿ, ಧ್ವಜ ಸಂಹಿತೆ ಪಾಲಿಸಿಕೊಂಡು, ಸಾರ್ವಜನಿಕರು ರಾಷ್ಟ್ರ ಧ್ವಜ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ, ವಾಹನಗಳಲ್ಲಿಯೂ ರಾಷ್ಟ್ರಧ್ವಜವನ್ನು ಅಳವಡಿಸಿ, ಗಣರಾಜ್ಯೋತ್ಸವವನ್ನು ಸಂಭ್ರಮಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸ್ಪಷಪಡಿಸಿದ್ದಾರೆ.

ಒಂದನೇಯ ಪುಟದಿಂದ

ಸಿಎಂ ಸ್ಥಾನದ ವಿಷಯ ನನ್ನ, ಸಿಎಂ-ಹೈಕಮಾಂಡ್ ನಡುವಣ ವಿಚಾರ : ಡಿಸಿಎಂ

ರಾಹುಲ್ ಗಾಂಧಿ ಅವರ ಭೇಟಿಯ ನಂತರ ನಿಮ್ಮ ಬೆಂಬಲಿಗ ಶಾಸಕರು ಸಂತೋಷವಾಗಿದ್ದಾರೆಯೇ? ಎಂದು ಕೇಳಿದಾಗ, ಅವರು ನಮ್ಮ ಪಕ್ಷದ ನಾಯಕರು. ನಮ್ಮ ಪಕ್ಷದ ನಾಯಕರನ್ನು, ಅಧ್ಯಕ್ಷರನ್ನು ಭೇಟಿ ಮಾಡುವುದು, ಕರೆ ಮೂಲಕ ಚರ್ಚೆ ಮಾಡುವುದು ಸಹಜ ಪ್ರಕ್ರಿಯೆ. ಅವುಗಳನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಇತ್ತೀಚೆಗೆ, ಮೈಸೂರು ವಿಮಾನ ನಿಲ್ದಾಣದ ರನ್ ವೇ ಬಳಿ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ. ಕೆ. ಶಿವಕುಮಾರ್ ಅವರೊಂದಿಗೆ ನಡೆಸಿದ್ದ ಪ್ರತ್ಯೇಕ ಮಾತುಕತೆಯು ಹಲವು ಊಹಾಪೋಹಗಳಿಗೆ ಕಾರಣವಾಗಿತ್ತು.

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಸೂಚನೆ

ರಾಯಚೂರು ಜಿಲ್ಲಾ ಉತ್ಸವದ ಕಾರ್ಯಕ್ರಮಗಳು ಫೆ.5, 6, 7ರವರೆಗೆ ನಿರಂತರ ನಡೆಯಲಿ

ಪ್ರತಿಯೊಂದು ಇವೆಂಟಗೂ ಹೆಚ್ಚಿನ ಜನರು ಸೇರಿ ಯಶಸ್ವಿಯಾಗುವಂತೆ ಪ್ರಚಾರ ಕಾರ್ಯಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ಬಸವಣೆಪ್ಪ ಕಲಶೆಟ್ಟಿ ಹಾಗೂ ವಿವಿಧ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಇದ್ದರು.

ಗಣರಾಜ್ಯೋತ್ಸವ-ಜಿಲ್ಲಾ ಉತ್ಸವ ಆಚರಣೆ ನಿಮಿತ್ತವಾಗಿ ತಾಲ್ಲೂಕ ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆ

ಜಿಲ್ಲಾ ಉತ್ಸವ ಅದ್ದೂರಿ ಆಚರಣೆಗೆ ಸಕಲ ಸಿದ್ಧತೆ-ಅಶೋಕ ಪವಾರ್

ಅಂಗವಾಗಿ ಜಿಲ್ಲಾಡಳಿತದ ವತಿ ಯಿಂದ ಮಹಿಳೆಯರಿಗೆ, ಮಕ್ಕಳಿಗೆ ಹಾಗೂ ಯುವಕರಿಗೆ ಹಲವು ಕ್ರೀಡೆಗಳನ್ನು ಮತ್ತು ಮನರಂಜನೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು.

ಇದೇ 16 ರಂದು ಜಿಲ್ಲಾ ಉತ್ಸ ವದ ಲೋಗೋ, ಪೋಸ್ಟರ್ ಮತ್ತು ಬ್ಯಾನರ್ ಬಿಡುಗಡೆ ನಡೆಯಲಿದ್ದು ಮತ್ತು ಲಗೋರಿ, ಗಿಲ್ಲೆ ದಾಡು, ಕೋಕೋ, ಕಬ್ಬಡಿ, ಕ್ರಿಕೆಟ್ ಕ್ರೀಡೆಗಳಿಗೆ ಚಾಲನೆ ಮತ್ತು ಜ.26 ಹಾಗೂ 27 ರಂದು ಮಕ್ಕಳ ಮಹೋತ್ಸ ವ ಕಾರ್ಯಕ್ರಮ, ದಿ.27 ರಂದು ಜಿಲ್ಲಾ ಉತ್ಸ ವದ ರಥೋತ್ಸ ವ ಸಿರವಾರ ಪಟ್ಟಣಕ್ಕೆ ಆಗಮಿಸಲಿದೆ ಎಂದು ಹೇಳಿದರು.

ಜಿಲ್ಲಾ ಉತ್ಸ ವ ಕಾರ್ಯಕ್ರಮದ ಅಂಗವಾಗಿ ಫಲಾಪುಷ್ಪ ಪ್ರದರ್ಶನ, ಆಹಾರ ಮೇಳ, ಉದ್ಯೋಗ ಮೇಳ ಸೇರಿದಂತೆ ಜಿಲ್ಲೆ, ರಾಜ್ಯ, ಅಂತರರಾಜ್ಯ ಸೇರಿದಂತೆ ಒಟ್ಟು 100 ಮಳಿಗೆಗಳು ಇರಲಿವೆ. ಜಿಲ್ಲೆಯಲ್ಲಿ ಸುಮಾರು ವರ್ಷಗಳ ನಂತರ ಈ ವರ್ಷ ನಡೆಯುತ್ತಿರುವ ಜಿಲ್ಲಾ ಉತ್ಸ ವವನ್ನು ನೋಡಲು ಸಿರವಾರ ತಾಲ್ಲೂಕಿನ ಎಲ್ಲಾ ಸಾರ್ವಜನಿಕರು ಕುಟುಂಬ ಸಮೇತ ಆಗಮಿಸಿ ವೀಕ್ಷಣೆ ಮಾಡಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ತಾ.ಪಂ. ಇಒ ಶಶಿಧರ್ ಸ್ವಾಮಿ, ಪ.ಪಂ. ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಆರೀಫ್ ಮಿಯಾ, ನೀರಾವರಿ ಇಲಾಖೆ ಎಇಇ ವಿಜಯಲಕ್ಷ್ಮಿ ಪಾಟೀಲ್, ಉಪ ಖಜನಾಧಿಕಾರಿ ಶಂಕ್ರಮ್ಮ, ಸಿಡಿಪಿಒ ಇಲಾಖೆಯ ರೇಣುಕಾ, ಕಸಪಾ ತಾಲ್ಲೂಕು ಅಧ್ಯಕ್ಷ ಮೌನೇಶ್ ಹಿರೇಹಣಗಿ, ಪ.ಪಂ. ಸದಸ್ಯ ಕೃಷ್ಣ ನಾಯಕ, ಸಿ.ಆರ್.ಪಿ ಮಹೇಶ್ ಸಿರವಾರ, ದೈಹಿಕ ಶಿಕ್ಷಕ ಮಹಿಬೂಬ್ ಪಾಶಾ, ವಿ.ಎ. ವಿಲ್ಸ ನ್, ಕಂದಾಯ ಇಲಾಖೆಯ ಹಿರೇಶ, ದಲಿತ ಸಂಘಟನೆಯ ಮುಖಂಡರಾದ ಡಿ.ಎಚ್. ಭೀಮಣ್ಣ, ಪ್ರಕಾಶ್ ಜೆ, ಹನುಮೇಶ ನಾಯಕ ಶಾಖಾಪೂರು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ನರೇಗಾ ಮರಳಿಸಿ, ಉದ್ಯೋಗದ ಹಕ್ಕು ಉಳಿಸಿ: ಶರಣಪ್ರಕಾಶ ಪಾಟೀಲ್ ಆಗ್ರಹ

ಪಂಚಾಯಿತಿಗಳನ್ನು ಕೇವಲ ಅನುಷ್ಠಾನ ಸಂಸ್ಥೆಗಳಾಗಿ ಸೀಮಿತಗೊಳಿಸಲಾಗುತ್ತಿದೆ. ಸ್ಥಳೀಯ ಅಗತ್ಯತೆಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ನಿರ್ಧರಿಸುವ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಗ್ರಾಮೀಣ ಆಸ್ತಿಗಳ ನಿರ್ಮಾಣಕ್ಕೂ ಅಡ್ಡಿಯಾಗುತ್ತಿದೆ ಎಂದು ಅವರು ದೂರಿದರು.

ಆದ್ದರಿಂದ, ನರೇಗಾ ಮರಳಿಸಿ - ಉದ್ಯೋಗದ ಹಕ್ಕು ಉಳಿಸಿ, ಗ್ರಾಮಗಳ ಸ್ವಯಂ ಆಡಳಿತದ ಹಕ್ಕನ್ನು ಮರುಸ್ಥಾಪಿಸಬೇಕು. ನಮ್ಮದೇ ಯೋಜನೆ, ನಮ್ಮದೇ ಆಡಳಿತ, ನಮ್ಮದೇ ಉದ್ಯೋಗ ಎನ್ನುವ ನರೇಗಾ ಯೋಜನೆ ತನ್ನ ಮೂಲ ರೂಪದಲ್ಲೇ ಮರುಜಾರಿಯಾಗಬೇಕು. ಕನ್ನಡಿಗರ ಮೇಲಿನ ಸರಣಿ ಅನ್ಯಾಯಗಳಿಗೆ ಕೇಂದ್ರ ಸರ್ಕಾರ ಕೊನೆ ಹಾಡಬೇಕು ಎಂದು ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಚಿವ ಎನ್.ಎಸ್. ಬೋಸರಾಜು, ಶಾಸಕರಾದ ಬಸನಗೌಡ ದದ್ದಲ್, ವಿಧಾನಪರಿಷತ್ ಸದಸ್ಯರಾದ ಎ. ವಸಂತಕುಮಾರ, ಶರಣಗೌಡ ಬಯ್ಯಾಪೂರ, ಮಾಜಿ ಶಾಸಕ ಡಿ.ಎಸ್. ಹೂಲಗೇರಿ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಜ.18ರಂದು ಸಂಕ್ರಾಂತಿ ಸಂಭ್ರಮ-ಪುಸ್ತಕ ಸಂತೆ

ಲವ್‌ಯು ಮುದ್ದು' ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಾದ ಯು. ಆಂಜಿನಯ್ಯ, ಸರಸ್ವತಿ ಎಸ್., ವಿಜಯಲಕ್ಷ್ಮೀ ಹಿರೆಮಠ, ನೂರ್ ಅಹ್ಮದ್ (ವಕೀಲರು), ಮಲ್ಲಿಕಾರ್ಜುನ ಗುಲಬರ್ಗಾ ಗೌಡ, ಡಾ. ಮಡಿವಾಳಯ್ಯ ಹಿರೇಮಠ, ನರಸಿಂಹಲು ಮರ್ಚೆಡ್, ಡಾ. ಚಿದಾನಂದ ಶಾಸ್ತ್ರಿ, ಬಸನಗೌಡ ಪಾಟೀಲ್ ಕಂಚನ ಕವಿ ಹಾಗೂ ಡಾ. ಮಡಿವಾಳಪ್ಪ ಗಡಗಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅಲ್ಲದೆ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದಲ್ಲಿರುವ ಸುಜ್ಞಾನ ಪಥ ಗುರುಕುಲಂ ಅನಾಥ ಮಕ್ಕಳ ಶಾಲೆಯನ್ನು ಅತ್ಯುತ್ತಮ ಶಾಲೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬೆಳಗ್ಗೆ 10 ಗಂಟೆಗೆ ನಡೆಯುವ ಪುಸ್ತಕ ಸಂತೆಯನ್ನು ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಕುಲಪತಿಗಳಾದ ಪ್ರೊ. ಶಿವಾನಂದ ಕೆಳಗಿನಮನಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಸಾಹಿತಿಗಳಾದ ವೀರಹನುಮಾನ, ಬಾಬು ಬಂಡಾರಿಗಲ್, ಚಿದಾನಂದ ಸಾಲಿ, ಈರಣ್ಣ ಬೆಂಗಾಲಿ, ಅಯ್ಯಪ್ಪಯ್ಯ ಹುಡಾ, ಜಾನ್ ವೆ ಮತ್ತು ವೆಂಕಟೇಶ್ ಬೇವಿನಬೆಂಚಿ ಉಪಸ್ಥಿತರಿರಲಿದ್ದಾರೆ.

ಬೆಳಗ್ಗೆ 11 ಗಂಟೆಗೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಕ್ರಾಂತಿ ಸಂಭ್ರಮ ಸಮಾರಂಭವನ್ನು ರಾಯಚೂರು ಗ್ರಾಮೀಣ ಶಾಸಕ ದದ್ದಲ ಬಸನಗೌಡ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಎ. ವಸಂತಕುಮಾರ, ಕೆಪಿಸಿಸಿ ಕಾರ್ಯದರ್ಶಿ ಕೆ. ಅಸ್ಲಾಂ ಪಾಶಾ, ಜಿಲ್ಲಾ ಕಾರಾಗೃಹ ಅಧೀಕ್ಷಕಿ ಅನಿತಾ ಹಿರೇಮನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರದೇವಿ, ಡಾ. ಶರಣಬಸವ ಪಾಟೀಲ್ ಜೋಳದಡಗಿ, ಚಂದ್ರಶೇಖರ ಪಾಟೀಲ್ ಮಿರ್ಜಾಪೂರು, ಕೃಷ್ಣ ಶಾವಂತಗೇರಿ, ಅಯ್ಯಣ್ಣ ವಡವಾಟಿ ಹಾಗೂ ಡಿ. ಶ್ರೀನಿವಾಸ ಭಾಗವಹಿಸಲಿದ್ದಾರೆ ಎಂದು ಮಾರುತಿ ಬಡಿಗೇರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಮರೇಗೌಡ, ಕಲಾವಿದರು ಸೈಯದ್ ವಲಿ, ನಿರ್ದೇಶಕರು ಮತ್ತು ಮೌನೇಶ್ ವಡವಾಟಿ ಉಪಸ್ಥಿತರಿದ್ದರು.

ಶಿವಯೋಗಿ ಸಿದ್ದರಾಮೇಶ್ವರ ಜಯಂತಿ : ಭಾವಚಿತ್ರದ ಅದ್ದೂರಿ ಮೆರವಣಿಗೆ

ಸಮಾನತೆಯ ಸಂದೇಶ ಸಾರಿದವರು ಸಿದ್ದರಾಮೇಶ್ವರರು : ಬಾಂಡಗೆ



ಬಾಗಲಕೋಟೆ,ಜ.16-

ಜಾತೀಯತೆ, ಆಚಾರ-ವಿಚಾರ ಎಂಬ ಮನೋಭಾವ ಬಿಟ್ಟು ನಾವೆಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರಿದವರು ಕಾಯಕಯೋಗಿ ಶಿವಯೋಗಿ ಸಿದ್ದರಾಮೇಶ್ವರು ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಶಿವಯೋಗಿ ಸಿದ್ದರಾಮೇಶ್ವರರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ನಾಡಿನ ಸಾಧು ಸಂತರು, ಶರಣರು, ಮಹಾಪುರುಷರು ಒಗ್ಗಟ್ಟಿನ ಸಂದೇಶವನ್ನು ಸಾರಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನೀವೆಲ್ಲರೂ ಅನುಸರಿಸುವ ಅಗತ್ಯವಿದೆ ಎಂದು ತಿಳಿಸಿದರು.

ಕಾಯಕಯೋಗಿ, ಮಹಾಪುರಷರನ್ನು ಇಂದು ನಾವು ಒಂದೊಂದು ಸಮಾಜಕ್ಕೆ ಸೀಮಿತ ಮಾಡುತ್ತಿದ್ದೇವೆ. ಸಮಾಜ ವಿಭಜಿಸುವ ಕಾರ್ಯ ಮಾಡದೇ ಸಮಾಜದಲ್ಲಿರುವ ಅಂಕು ಡೊಂಕುಗಳನ್ನು ತಿದ್ದುಕೊಳ್ಳುವ ಮೂಲಕ ಉತ್ತಮ ಸಾಮಾಜ ನಿರ್ಮಾಣ ಮಾಡುವ ಕಾರ್ಯ ಮಾಡಬೇಕಿದೆ. ಸಮುದಾಯದಲ್ಲಿ ಮಕ್ಕಳಿಗೆ

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾ ಮಾತನಾಡಿ ಶಿವಯೋಗಿ ಸಿದ್ದರಾಮೇಶ್ವರರು ತಮ್ಮ ವಚನಗಳ ಮೂಲಕ ಜಗತ್ತಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ತಮ್ಮ ವಚನಗಳ ಮೂಲಕ ಬದುಕಿನ ಆದರ್ಶ, ಗುರಿಗಳನ್ನು ತಿಳಿಸಿಕೊಟ್ಟಿದ್ದಾರೆ. ಶರಣರ ವಚನಗಳ ಅಧ್ಯಯನದಿಂದ ಸನ್ಮಾರ್ಗವನ್ನು ಅನುಸರಿಸಬೇಕಿದೆ. ಅಂದಾಗ ಮಾತ್ರ ಸಮಾಜದಲ್ಲಿ ಶಾಂತಿ, ಸಮೃದ್ಧಿ, ನೆಮ್ಮದಿ ಬರಲು ಸಾಧ್ಯವಾಗುತ್ತದೆ. ಶಿವಯೋಗಿಗಳು ಕಾಯಕದಲ್ಲಿ ನಿರತರಾಗಿ ಬದುಕು ಕಟ್ಟಿಕೊಂಡವರು. ಅವರ ಹಾಕಿದ ಮಾರ್ಗದಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ ಮಹಾಪುರುಷರ ಜಯಂತಿ ಆಚರಣೆಯಿಂದಾದರೂ ಸಮುದಾಯದವರು ಸಂಘಟಿತರಾಗಬೇಕು ಎಂದು ಹೇಳಿದರು. ಉಪನ್ಯಾಸಕರಾಗಿ ಆಗಮಿಸಿದ್ದ ಬಾದಾಮಿಯ ಸರಕಾಋಇ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಚಂದ್ರೇಶಖರ ಹೆಗಡೆ ಮಾತನಾಡಿ ಸಿದ್ದರಾಮೇಶ್ವರರು ಕೆರೆ, ಕಾಲುವೆ,

ದೇವಸ್ಥಾನ ಕಟ್ಟಿಸುವ ಮೂಲಕ ಕರ್ಮ ಮಾರ್ಗದಲ್ಲಿ ಸಾಗಿ ಮಾನವ ಜನ್ಮ ಸಾರ್ಥಕ ಎಂದು ನಿರೂಪಿಸಿದರು. ಬಸವಣ್ಣ ಮತ್ತು ಅನೇಕ ಶರಣರ ಭೇಟಿಯಿಂದ ಜ್ಞಾನ ಮಾರ್ಗದಲ್ಲಿ ಸಾಗಿ, ಸಕಲ ಜೀವಾತ್ಮಗಳಿಗೆ ಒಳಿತನ್ನು ಬಯಸಿದ್ದಾರೆ ಎಂದು ಹೇಳಿದರು.

ಪ್ರಾರಂಭದಲ್ಲಿ ಸಮುದಾಯದ ಮುಖಂಡರಾದ ಅಶೋಕ ನಿಂಬಾವಳಿ ಮಾತನಾಡಿ ಸಮಾಜದಲ್ಲಿರುವ ಅನಿಷ್ಠ ಪದ್ದತಿಗಳನ್ನು ದೂರ ಮಾಡಿ, ಸಮಾಜಕ್ಕೆ ಸಂಸ್ಕಾರ ಕೊಡುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಸಮುದಾಯದವರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕೊಟ್ಟು ಸಂಘಟಿತರಾಗಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಅಕ್ಷಯ ಕಲ್ಲಕುಟಗರಗೆ 10,001 ರೂ. ನಗದು ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಪಂಚಾಯತ ಸಹಾಯಕ ನಿರ್ದೇಶಕ ಎಸ್.ಎಂ.ಕಾಂಬಳೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸೇರಿದಂತೆ ಸಮುದಾಯದ ಮುಖಂಡರಾದ ಲಕ್ಕಪ್ಪ ಬಂಡಿವಡ್ಡರ, ಯಲ್ಲಪ್ಪ ಕೋಟಿಕಲ್ಲ, ಯಮನಪ್ಪ ಕಲ್ಲಕುಟಗರ, ಪಾತ್ರೋಟ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಿದ್ದರಾಮೇಶ್ವರರ ಭಾವಚಿತ್ರದ ಅದ್ದೂರಿ ಮೆರವಣಿಗೆ

ಕಾರ್ಯಕ್ರಮ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಶಿವಯೋಗಿ ಸಿದ್ದರಾಮೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ಅಂಬೇಡ್ಕರ ಭವನಕ್ಕೆ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಪೂರ್ಣಕುಂಬ ಹೊತ್ತ ಮಹಿಳೆಯರು ಆಕರ್ಷಣೆಯ ಕೇಂದ್ರ ಬಿಂದು ಆಗಿದ್ದರು.

04 ಹೊಸ ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರಗಳ ಆಯ್ಕೆ ಸಮಿತಿ ಸಭೆ



ಕಲಬುರಗಿ,ಜ.16-

ಜಿಲ್ಲಾಧಿಕಾರಿಗಳು ಕಲಬುರಗಿ ಅವರ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕಲಬುರಗಿ ಜಿಲ್ಲೆಯ 04 ಹೊಸ ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರಗಳ ಆಯ್ಕೆಗಾಗಿ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ಹೊಸ ತಾಲ್ಲೂಕುಗಳಾದ ಕಮಲಾಪೂರ, ಕಾಳಗಿ, ಶಹಾಬಾದ ಹಾಗೂ ಯಡ್ರಾಮಿ ತಾಲ್ಲೂಕಿನಲ್ಲಿ ಸಾಂತ್ವನ ಕೇಂದ್ರ ಪ್ರಾರಂಭಿಸಲು ಸ್ವಯಂ ಸೇವಾ ಸಂಸ್ಥೆಗಳಿಂದ ದಿನಾಂಕ:10-09-2024ರಂದು ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಅಂತಿಮ ದಿನಾಂಕದೊಳಗೆ ಒಟ್ಟು 54 ಸ್ವಯಂ ಸೇವಾ ಸಂಸ್ಥೆಗಳಿಂದ ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತವೆ ಎಂದು ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಕುಮಾರ ರಾಠೋಡ್ ಅವರು ಸಭೆಯಲ್ಲಿ ತಿಳಿಸಿದರು.

ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ ತಾಲ್ಲೂಕು ಮಟ್ಟದಲ್ಲಿ 07 ಸದಸ್ಯರ ಸಮಿತಿ ರಚಿಸಿದ್ದು, ಅದರಂತೆ ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಿ, ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ನಡುವಳಿಗಳನ್ನು ಸಲ್ಲಿಸಿರುವುದಾಗಿ ಹಾಗೂ ತಾಲ್ಲೂಕು ಸಮಿತಿಯಲ್ಲಿ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಕೂಡ ಸದಸ್ಯರಿದ್ದು, ಆದರೆ ಅವರ ರುಜು ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಯಿತು. ಆಗ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಕಲಬುರಗಿ ರವರು ಸಾಂತ್ವನ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರದ ಮಾನದಂಡಗಳ ಪ್ರಕಾರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ಸಂಸ್ಥೆಗಳನ್ನು ಆಯ್ಕೆಮಾಡಲು ಹಾಗೂ ತಾಲ್ಲೂಕ ಮಟ್ಟದಲ್ಲಿ ತಹಸೀಲ್ದಾರರ ಅಧ್ಯಕ್ಷತೆಯ ಉಪ ಸಮಿತಿಯ ಸದಸ್ಯರು ಸ್ವಯಂ ಸೇವಾ ಸಂಸ್ಥೆಗಳಿಗೆ ಭೇಟಿನೀಡಿ ಸಂಸ್ಥೆಯಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಿ 03 ದಿನದೊಳಗೆ ವರದಿ ಸಲ್ಲಿಸಲು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಸೂಚಿಸಿದರು

ತಾಲ್ಲೂಕ ಮಟ್ಟದ ಸಮಿತಿಯಲ್ಲಿನ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಇವರ ಅನುಮೋದನೆ ಹಾಗೂ ರುಜು ಪಡೆಯಲು,

ಅದೇರೀತಿಯಾಗಿ ತಾಲ್ಲೂಕಾ ಕಾನೂನು ಸೇವಾ ಪ್ರಾಧಿಕಾರ ಇಲ್ಲದ ತಾಲ್ಲೂಕುಗಳಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು, ಕಲಬುರಗಿ ರವರ ಅನುಮೋದನೆ ಪಡೆದು ವರದಿ ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಅದೇರೀತಿಯಾಗಿ, ಕಲಬುರಗಿ ಜಿಲ್ಲೆಯ 09 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗಳಿಗೆ ಆಫ್ಲೈನ್ ಮತ್ತು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ತಾತ್ಕಾಲಿಕ ಮತ್ತು ಅಂತಿಮ ಆಯ್ಕೆಗೆ ಬಾಕಿ ಇರುವ ಅಂಗನವಾಡಿ ಸಹಾಯಕಿಯರ ಆಯ್ಕೆಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಡದೊಂದಿಗೆ ಮಾಹಿತಿ ಒದಗಿಸಿದ್ದು, ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ತಾತ್ಕಾಲಿಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಕ್ಷೇಪಣೆಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಆಯ್ಕೆಗೆ ತೀರ್ಮಾನಿಸಲಾಯಿತು.

ಸಭೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದು, ಸಮಿತಿ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮಣ ಶೃಂಗೇರಿ, ಜಿಲ್ಲಾ ಆರೋಗ್ಯ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ, ಉಪ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಶಾಲಾ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕಿ ಶಂಕ್ರಮ್ಮ ಡವಳಗಿ, , ಜಿಲ್ಲಾ ನಿರೂಪಣಾಧಿಕಾರಿ ಶ್ರೀ ಮುರುಗೇಶ ಗುಣಾರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಶ್ರೀ ಶಿವಶರಣಪ್ಪ , ಪೋಲಿಸ್ ಅಧಿಕಾರಿಗಳು, ಕಲಬುರಗಿ ಸಮಿತಿ ಇತರ ಸದಸ್ಯರು ಹಾಗೂ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಜರಿದ್ದರು.



18 ರಂದು ಚಾಲುಕ್ಯ ನಡಿಗೆ : ಪ್ರಚಾರ ಸಾಮಗ್ರಿ ಬಿಡುಗಡೆ

ಬಾಗಲಕೋಟೆ,ಜ.16-

ಚಾಲುಕ್ಯ ಉತ್ಸವ-2026ರ ಅಂಗವಾಗಿ ಜನವರಿ 18 ರಂದು ಬೆಳಿಗ್ಗೆ 7 ಗಂಟೆಗೆ ಹಮ್ಮಿಕೊಂಡ ಚಾಲುಕ್ಯ ನಡಿಗೆ ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳನ್ನು ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಬುಧವಾರ ಬಿಡುಗಡೆಗೊಳಿಸಿದರು.

ಚಾಲುಕ್ಯ ನಡಿಗೆ ಸ್ಮಾರಕದ ಕಡೆಗೆ ಕಾರ್ಯಕ್ರಮಕ್ಕೆ ಟೀ ಶರ್ಟಗಳನ್ನು ರಾಜ್ಯ ಸರಕಾರಿ ನೌಕರರ ಸಂಘದ ಬಾದಾಮಿ ತಾಲೂಕಾ ಘಟಕ ಹಾಗೂ ಭಾರತೀಯ ವೈದ್ಯಕೀಯ ಸಂಘದ ತಾಲೂಕಾ ಘಟಕ ಇವರುಗಳ ಜಂಟಿಯಾಗಿ ನೀಡಿದರು. ಇದರ ಜೊತೆಗೆ ಕಾರ್ಯಕ್ರಮದ ಪೋಸ್ಟರಗಳನ್ನು ಸಹ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಹಶೀಲದಾರ ಎಸ್.ಬಿ.ಬೊಮ್ಮನ್ನವರ, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಸತೀಶ ಮಾಕೊಂಡ, ಮಲ್ಲಿಕಾರ್ಜುನ ಬಡಿಗೇರ, ತಾಲೂಕಾ ನೌಕರರ ಸಂಘದ ಅಧ್ಯಕ್ಷ ಡಾ.ಎಂ.ಎನ್.ಸಿದ್ದಲಿಂಗಪ್ಪನ್ನವರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ, ಘಟಕ ವ್ಯವಸ್ಥಾಪಕ ಅಶೋಕ ಕೋರಿ, ನಿವೃತ್ತ ಪ್ರಾಚಾರ್ಯ ಆರ್.ಬಿ.ಸಂಕದಾಳ, ಹನಮಂತ ಅಪ್ಪನ್ನವರ ಸೇರಿದಂತೆ ಬಾದಾಮಿ ತಾಲೂಕಾ ಆಡಳಿತದ ಎಲ್ಲ ಸರಕಾರಿ ನೌಕರರು ಉಪಸ್ಥಿತರಿದ್ದರು.

ಪತ್ರಕರ್ತ ಧರಮಪೂರ ಕುಟುಂಬಸ್ಥರಿಗೆ ಶಾಸಕ ಪ್ರಭು ಚವ್ಹಾಣ ಸಾಂತ್ವನ, ನೆರವು



ಔರಾದ್,ಜ.16-

ಇತ್ತೀಚೆಗೆ ಹೃದಯಾಘಾತ ದಿಂದ ನಿಧನರಾದ ಹಿರಿಯ ಪತ್ರಕರ್ತ ದಿ.ನಾಗಶೆಟ್ಟಿ ಧರಮ ಪೂರ ಅವರ ಮನೆಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಚವ್ಹಾಣ ಅವರು ಸೋಮವಾರ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ವೈಯಕ್ತಿಕ ಧನಸಹಾಯ ಮಾಡಿದರು.

ನಾಗಶೆಟ್ಟಿ ಧರಮಪೂರ ತುಂಬಾ ಒಳ್ಳೆಯ ವ್ಯಕ್ತಿ. ಸದಾ ಲವಲವಿಕೆಯಿಂದ ಇರುವವರು. ಎಲ್ಲರನ್ನು ನಗಿಸುತ್ತಲೇ ಮಾತನಾಡುವವರು. ನೇರ ನುಡಿಯ ವ್ಯಕ್ತಿತ್ವ. ಸಮಾಜದ ಮೇಲೆ ಅಪಾರ ಕಾಳಜಿ ಹೊಂದಿದ್ದರು. ಸುಮಾರು ಮೂರು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿದ್ದಾರೆ. ಅವರ ಅಕಾಲಿಕ ನಿಧನದಿಂದ ಬೀದರ ಜಿಲ್ಲೆಯ ಪತ್ರಿಕಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ಸಣ್ಣ ಮಕ್ಕಳಿದ್ದು ಅವರನ್ನು ಸರಿಯಾಗಿ ಬೆಳೆಸುವ ಜವಾಬ್ದಾರಿ ತಾಯಿಯ ಮೇಲಿದೆ. ಈ ಸಂದರ್ಭದಲ್ಲಿ ಧೈರ್ಯಗುಂದದೆ ಮಕ್ಕಳಲ್ಲಿ ಧೈರ್ಯ ತುಂಬಿ ಅವರನ್ನು ಚನ್ನಾಗಿ ಬೆಳೆಸಬೇಕು. ನಾನು ಸದಾ ನಿಮ್ಮ ಕುಟುಂಬದ ಜೊತೆಗಿದ್ದೇನೆ. ಏನೆ ಸಮಸ್ಯೆಯಿರಲಿ ನೇರವಾಗಿ ತಿಳಿಸಿ ಎಂದು ಕುಟುಂಬಸ್ಥರಿಗೆ ಧೈರ್ಯ ಹೇಳಿದರು.

ಈ ಸಂದರ್ಭದಲ್ಲಿ ಬಸವ ಕಲ್ಯಾಣ ಶಾಸಕರಾದ ಶರಣು ಸಲಗರ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸುರೇಶ ಚನ್ನಶೆಟ್ಟಿ, ಮುಖಂಡರಾದ ರೇವಣಸಿದ್ದಪ್ಪ ಜಲಾದೆ, ರಾಮಶೆಟ್ಟಿ ಪನ್ನಾಳೆ, ಶಿವಾಜಿರಾವ ಪಾಟೀಲ ಮುಂಗನಾಳ, ರಮೇಶ ಬಿರಾದಾರ, ಗುರುನಾಥ ರಾಜಗೀರಾ ಸೇರಿದಂತೆ ಸ್ಥಳೀಯ ಮುಖಂಡರು, ಸಾರ್ವಜನಿಕರು ಹಾಗೂ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಿದ್ದರಾಮೇಶ್ವರ ಜಯಂತಿ ಆಚರಣೆ

ವಿಜಯನಗರ,ಜ.16-

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಶ್ರೀ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಅವರು ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿ ಆಚರಿಸಲಾಯಿತು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್, ಭೋವಿ ಸಮಾಜದ ಜಿಲ್ಲಾಧ್ಯಕ್ಷ ದೊಡ್ಡರಂಗಣ್ಣ, ತಾಲ್ಲೂಕು ಅಧ್ಯಕ್ಷ ವಿ.ತಿಪ್ಪೇಸ್ವಾಮಿ, ಸಮಾಜದ ರಾಮಾಂಜಿನಿ, ಗಾಳೆಪ್ಪ, ದೇವೇಂದ್ರಪ್ಪ, ಶಂಕರಪ್ಪ, ಮಲ್ಲಿಕಾರ್ಜುನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಂಡೂರು: ನಾರಿಹಳ್ಳ ಜಲಾಶಯದಲ್ಲಿ ಮೀನುಮರಿ ಬಿತ್ತನೆ

ಬಳ್ಳಾರಿ,ಜ.16-

ಜಿಲ್ಲೆಯ ಸಂಡೂರು ತಾಲ್ಲೂಕಿನ ನಾರಿಹಳ್ಳ ಜಲಾಶಯಕ್ಕೆ ರಾಜ್ಯ ವಲಯ ಯೋಜನೆಯಡಿ 5.80 ಲಕ್ಷ ಬಲಿತ ಬಿತ್ತನೆ ಮೀನುಮರಿಗಳನ್ನು ಮಂಗಳವಾರ ದಾಸ್ತಾನು ಮಾಡಲಾಯಿತು. ಈ ಸಂದರ್ಭದಲ್ಲಿ ಬಳ್ಳಾರಿ ವಲಯ ಮೀನುಗಾರಿಕೆ ಜಂಟಿ ನಿರ್ದೇಶಕ ಶರಣಬಸವ, ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ, ತಾರನಗರ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಪಂಪಾಪತಿ, ಸಂಡೂರು ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕ ಮಂಜುನಾಥ ಕೆ.ಎಸ್ ಸೇರಿದಂತೆ ಮೀನುಗಾರಿಕೆ ಇಲಾಖೆ ಸಿಬ್ಬಂದಿ ಹಾಗೂ ಸ್ಥಳೀಯ ಮೀನುಗಾರರು, ಪರವಾನಿಗೆದಾರರು ಹಾಜರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಮಹಿಳೆಯರ ಮೇಲಿನ ಪುರುಷಹಂಕಾರದ ದೌರ್ಜನ್ಯಕ್ಕೆ ಕೊನೆ ಎಂದು?



ಮನೆಯಲ್ಲಿ, ಸಾರ್ವಜನಿಕ ಜಾಗಗಳಲ್ಲಿ, ಬಸ್‌ಗಳಲ್ಲಿ, ದುಡಿಯುವ ಜಾಗಗಳಲ್ಲಿ, ಕಚೇರಿ ಹೀಗೆ ಎಲ್ಲಿ ನೋಡಿದರೂ ಮಹಿಳೆಯರ ಮೇಲಿನ ಪುರುಷರ ದಬ್ಬಾಳಿಕೆಗೆ ಕಡಿವಾಣವೇ ಇಲ್ಲದಂತಾಗಿದೆ. ರಾಜೀವನಂತಹ ದುಷ್ಟರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಕಾಂಗ್ರೆಸ್ ಪಕ್ಷದಿಂದ ಆತನನ್ನು ಹೊರ ಹಾಕುವ ಕೆಲಸ ತಕ್ಷಣ ಮಾಡಬೇಕಿದೆ.

ಜಗತ್ತು ಶರವೇಗದಲ್ಲಿ ಬದಲಾಗುತ್ತಿದೆ. ಆದರೆ, ಮಹಿಳೆಯರ ಮೇಲಿನ ಪುರುಷರ ದಬ್ಬಾಳಿಕೆ, ಅಸಹನೆ, ಕೀಳು ಭಾವನೆಗಳು ಬದಲಾಗುವ ಲಕ್ಷಣ ಕಾಣುತ್ತಿಲ್ಲ. ಹೆಣ್ಣು ಎಷ್ಟೇ ಉನ್ನತ ಮಟ್ಟದ ಅಧಿಕಾರಿಯಾಗಿರಲಿ, ಪ್ರತಿಷ್ಠಿತ ಹುದ್ದೆಯಲ್ಲಿರಲಿ, ಎಷ್ಟೇ ಓದಿರಲಿ, ರಾಜಕೀಯ ಸ್ಥಾನದಲ್ಲಿರಲಿ ಅಥವಾ ಸಾಮಾನ್ಯ ಮಹಿಳೆಯೇ ಆಗಿರಲಿ ಆಕೆಯ ಮೇಲಿನ ಗಂಡಿನ ತಿರಸ್ಕಾರಕ್ಕೆ ಮಿತಿಯೇ ಇಲ್ಲ. ಹೆಣ್ಣೆಂದರೆ ಗಂಡಿನ ಅಡಿಯಾಳಾಗಿರಬೇಕಾದ ಜೀವ, ಆತನ ಬೇಕು ಬೇಡಗಳನ್ನು ಪೂರೈಸಬೇಕಾದ ಗುಲಾಮಳು ಎಂಬ ಭಾವನೆ ಕೌಟುಂಬಿಕ ವಾತಾವರಣದಲ್ಲಿ ಹೇಗಿದೆಯೋ, ಅದೇ ತರ ಸಾಮಾಜಿಕ ಸಂದರ್ಭಗಳಲ್ಲಿ, ಸರ್ಕಾರದೊಳಗೆ, ಕಚೇರಿಗಳಲ್ಲಿ, ಮನರಂಜನಾಕ್ಷೇತ್ರ, ರಾಜಕೀಯದಲ್ಲೂ ಢಾಳಾಗಿ ಕಾಣಿಸುತ್ತಿದೆ. ಹೆಣ್ಣು ಮೇಲಧಿಕಾರಿಯಾಗಿದ್ದು, ಆಕೆಯ ಕೈ ಕೆಳಗೆ ದುಡಿಯುವ ಪುರುಷರೂ ಭಯವಿಲ್ಲದೇ ತಮ್ಮ ಅಹಂಕಾರದ ನಡವಳಿಕೆ ಪ್ರದರ್ಶಿಸುವ ಅನೇಕ ಉದಾಹರಣೆಗಳಿವೆ.

ಕಳೆದ ಸೋಮವಾರ (ಜ.12) ತುಮಕೂರಿನ ಶಿಡ್ಲಘಟ್ಟದ ಕಾಂಗ್ರೆಸ್ ಮುಖಂಡ ರಾಜೀವ ಗೌಡ ಎಂಬಾತ ಪೌರಾಯುಕ್ತೆ ಅಮೃತಾ ಗೌಡ ಅವರಿಗೆ ಕರೆ ಮಾಡಿ ಮಾತನಾಡಿದ ರೀತಿ ಆತನಲ್ಲಿರುವ ಪುರುಷಹಂಕಾರಕ್ಕೆ ಹಿಡಿದ ಕೈಗನ್ನಡಿ. ರಸ್ತೆಯ ಬದಿ ಹಾಕಿದ್ದ ಅನಧಿಕೃತ ಫ್ಲೆಕ್ಸ್ ತೆಗೆಸಿದರೆಂದು ಸಿಟ್ಟಾದ ಆತ ಮಹಿಳಾ ಅಧಿಕಾರಿಯೊಂದಿಗೆ ಸಭ್ಯ ರೀತಿಯಲ್ಲಿ ಸಂವಹನ ನಡೆಸುವ ಬದಲು ಫ್ಲೆಕ್ಸ್ ತೆಗೆದ ಪೌರ ನೌಕರರಿಗೆ ಅವಾಚ್ಯ ಪದಗಳನ್ನು ಬಳಸಿ ನಿಂದಿಸಿದ್ದು, ಅದನ್ನು ಆಕ್ಷೇಪಿಸಿದಾಗ ಅಧಿಕಾರಿಯನ್ನೇ ಏಕವಚನದಲ್ಲಿ ಬೈದಿದ್ದಲ್ಲದೇ, ಊರಿನ ಜನರನ್ನೆಲ್ಲ ಕರೆಸಿ ದಾಳಿ ಮಾಡಿಸುವ ಬೆದರಿಕೆಯೊಡ್ಡಿದ್ದು ದುರಹಂಕಾರದ ಪರಮಾವಧಿ. ಮನೆಯಲ್ಲಿ, ಸಾರ್ವಜನಿಕ ಜಾಗಗಳಲ್ಲಿ, ಬಸ್‌ಗಳಲ್ಲಿ, ದುಡಿಯುವ ಜಾಗಗಳಲ್ಲಿ, ಕಚೇರಿ ಹೀಗೆ ಎಲ್ಲಿ ನೋಡಿದರೂ ಮಹಿಳೆಯರ ಮೇಲಿನ ಪುರುಷರ ದಬ್ಬಾಳಿಕೆಗೆ ಕಡಿವಾಣವೇ ಇಲ್ಲದಂತಾಗಿದೆ.

ರಾಜೀವನಂತಹ ದುಷ್ಟರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಕಾಂಗ್ರೆಸ್ ಪಕ್ಷ ಆತನಿಗೆ ಈಗಾಗಲೇ ಶೋಕಾಸ್ ನೋಟಿಸ್ ಜಾರಿ ಮಾಡಿರುವುದು, ಕಾಂಗ್ರೆಸ್ ಮುಖಂಡರು ಆತನ ದುರ್ವರ್ತನೆಯನ್ನು ಖಂಡಿಸಿರುವುದು, ರಾಜ್ಯ ಮಹಿಳಾ ಆಯೋಗ ತಕ್ಷಣವೇ ಕ್ರಮಕ್ಕೆ ಒತ್ತಾಯಿಸಿ ಎಸ್‌ಪಿಗೆ ಪತ್ರ ಬರೆದಿರುವುದು ಶ್ಲಾಘನೀಯ ನಡೆ. ಇಂತಹ ನಡೆಯನ್ನು ಬಿಜೆಪಿಯಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ರಾಜ್ಯದಲ್ಲಿ ಬಿಜೆಪಿಯ ಶಾಸಕರೇ ಸಚಿವೆ, ಮಹಿಳಾ ಅಧಿಕಾರಿಗಳ ಬಗ್ಗೆ ಮಾನಹಾನಿಕರ ಹೇಳಿಕೆ ನೀಡಿದ ಪ್ರಕರಣಗಳಲ್ಲಿ ಪಕ್ಷ ಯಾವುದೇ ಶಿಸ್ತುಕ್ರಮ ಜರುಗಿಸಿದ ಉದಾಹರಣೆ ಇಲ್ಲ. ಎರಡು ಅತ್ಯಾಚಾರ ಪ್ರಕರಣಗಳ ಆರೋಪಿ ಬಿಜೆಪಿ ಶಾಸಕ ಮುನಿರತ್ನ ಈಗಲೂ ತನ್ನ ಪ್ರತಿಸ್ಪರ್ಧಿ ಮಹಿಳೆಯ ವಿರುದ್ಧ ಮಾನಹಾನಿಕರ ಹೇಳಿಕೆ ನೀಡುವುದನ್ನು ಮುಂದುವರಿಸಿದ್ದಾರೆ.

ಕಳೆದ ವರ್ಷ ಬೆಳಗಾವಿಯ ಸುವರ್ಣ ಸೌಧದಲ್ಲಿ ವಿಧಾನಪರಿಷತ್ ಕಲಾಪ ಮುಗಿಯುವ ವೇಳೆಗೆ ಮಾತಿನ ಸಮರ ಜೋರಾಗಿ, ಬಿಜೆಪಿ ಸದಸ್ಯ ಸಿ ಟಿ ರವಿ ಎದುರಿಗೆ ನಿಂತಿದ್ದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಪ್ರಾಸ್ಟಿಟ್ಯೂಟ್‌ಎಂದು ಏಳು ಬಾರಿ ನಿಂದಿಸಿದ ಪ್ರಕರಣ ಇಡೀ ರಾಜ್ಯವೇ ತಲೆ ತಗ್ಗಿಸುವ ವಿಚಾರ. ಅದೂ ಜನಪ್ರತಿನಿಧಿಗಳಾದವರು ಸಾಮಾಜಿಕ ಸಭ್ಯತೆಯ ಎಲ್ಲೆ ಮೀರಲೇಬಾರದು ಎಂದು ಸ್ವಯಂ ಕಡಿವಾಣ ಹಾಕಿಕೊಳ್ಳಬೇಕಿರುವ ಪವಿತ್ರವಾದ ಜಾಗದಲ್ಲಿ! ದುರಂತವೆಂದರೆ, ಸಭಾಪತಿ ಬಸವರಾಜ ಹೊರಟ್ಟಿ ತಕ್ಷಣ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಏನು ಮಾಡಬೇಕಿತ್ತೋ ಅದನ್ನು ಮಾಡದೇ ಜಾರಿಕೊಳ್ಳುವ ಹೇಳಿಕೆ ನೀಡುತ್ತಾ ಜವಾಬ್ದಾರಿ ಮರೆತರು. ನಂತರ ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿದಾಗ ಕೋರ್ಟ್ ಪ್ರಕರಣಕ್ಕೆ ತಡೆಯಾಜ್ಞೆ ಕೊಡುತ್ತದೆ! ಇಲ್ಲಿ ಶಾಸನ ರೂಪಿಸುವ ಸ್ಥಾನದಲ್ಲಿರುವ ವ್ಯಕ್ತಿಗಳು, ಅದೇ ಸ್ಥಾನದಲ್ಲಿರುವ ಹೆಣ್ಣಿಗೆ ಅವಮಾನ ಮಾಡಿದಾಗ ಕೋರ್ಟ್‌ಗಳು ಕೂಡಾ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಲಿಲ್ಲ ಎಂಬುದು ವಿಷಾದಕರ. ಒಂದು ದಿನದ ಮಟ್ಟಿಗೂ ಸಿ ಟಿ ರವಿಯನ್ನು ವಿಧಾನ ಪರಿಷತ್ತಿನಿಂದ ಅಮಾನತು ಮಾಡದ ಸಭಾಧ್ಯಕ್ಷರೂ ಸ್ತ್ರೀ ಘನತೆಗೆ ಗೌರವ ಕೊಟ್ಟಿಲ್ಲ ಎಂದೇ ಅರ್ಥ. ಹಾಗೆ ಮಾಡದೇ ಸ್ವತಃ ಸಭಾಧ್ಯಕ್ಷರೇ ಪೀಠದ ಘನತೆ ಕಳೆದಿದ್ದಾರೆ ಎಂದು ವಿಷಾದದಿಂದಲೇ ಹೇಳಬೇಕಾಗಿದೆ. ಸಭ್ಯತೆ ಮರೆಯುವ ಜನಪ್ರತಿನಿಧಿಗಳಿಗೆ ಬುದ್ಧಿ ಹೇಳುವ ಕೆಲಸ ಆಗಿಂದಾಗಲೇ ಆಗಬೇಕಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್ ಅವರ ಬಗ್ಗೆ ತೀರಾ ಅವಮಾನಕರವಾಗಿ ವಿಧಾನಸೌಧದ ಮುಂದೆ ಮಾತನಾಡಿದ್ದ ಬಿಜೆಪಿಯ ಎಂಎಲ್‌ಸಿ ಎನ್ ರವಿಕುಮಾರ್ ವಿರುದ್ಧವೂ ಪ್ರಕರಣ ದಾಖಲಾಗಿದೆ. ಅದು ಸುದ್ದಿಯಾದದ್ದು ಬಿಟ್ಟರೆ ಮುಂದೆ ಯಾವುದೇ ಕ್ರಮ ಆಗಿಲ್ಲ. ನಟಿ ರಮ್ಯಾ ಅವರ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಅಶ್ಲೀಲವಾಗಿ ಕಮೆಂಟ್ ಮಾಡಿದ್ದ ಹಲವರನ್ನು ಪೊಲೀಸರು ಬಂಧಿಸಿದ್ದರು. ಪ್ರಕರಣ ಕೋರ್ಟ್‌ನಲ್ಲಿದೆ.

ವಾರದ ಹಿಂದಷ್ಟೇ ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಅವರು ತಮಗೆ ಸೋಷಿಯಲ್ ಮೀಡಿಯಾದಲ್ಲಿ ಅಶ್ಲೀಲ ಕಮೆಂಟ್ ಮಾಡಿದ್ದ ಕಿಡಿಗೇಡಿಯ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಆರೋಪಿಯ ಬಂಧನವಾಗಿದೆ. ಇಂತಹ ಸಾಲು ಸಾಲು ಪ್ರಕರಣಗಳು ವರದಿಯಾಗುತ್ತಿವೆ. ಅಧಿಕಾರದಲ್ಲಿರುವ ಮಹಿಳೆಯರಿಗೇ ಈ ರೀತಿಯಾದರೆ ಸಾಮಾನ್ಯ ಮಹಿಳೆಯರ ಪರಿಸ್ಥಿತಿ ಹೇಗಿರಬಹುದು? ಸಾಮಾಜಿಕ ಮಾಧ್ಯಮಗಳಲ್ಲಿ ಮಹಿಳೆಯರ ಬಗ್ಗೆ ಕಿಡಿಗೇಡಿಗಳು ಬಳಸುವ ಪದಗಳು ಈ ಸಮಾಜ ತಲುಪಿರುವ ಅಧೋಗತಿಯನ್ನು ತೋರಿಸುತ್ತದೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ದಶಕಗಳಿಂದ ಅಶ್ಲೀಲವಾಗಿ ನಿಂದಿಸಲಾಗುತ್ತಿದೆ. ಆಕೆಗೀಗ ವಯಸ್ಸು 79. ಈಗಲೂ ಅವರನ್ನು ಬಾರ್ ಡಾನ್ಸರ್ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಎಳೆಯ ವಯಸ್ಸಿನ ಯುವಕರು ಅವಮಾನಿಸುತ್ತಿದ್ದಾರೆ. ಆ ಪರಿ ಯುವ ಮನಸ್ಸುಗಳಲ್ಲಿ ಸೋನಿಯಾಗಾಂಧಿ ಅವರ ಬಗ್ಗೆ ವಿಷ ತುಂಬಲಾಗಿದೆ. 55 ವರ್ಷಗಳಿಂದ ಭಾರತದಲ್ಲೇ ನೆಲೆಸಿದ್ದರೂ, ಸಂಸದೆಯಾಗಿ, ಕಾಂಗ್ರೆಸ್ ಪಕ್ಷದ ಅಧಿನಾಯಕಿಯಾಗಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದರೂ ಈಗಲೂ ಸೋನಿಯಾರನ್ನು ಇಟಲಿಯವರು, ವಿದೇಶಿ ಮಹಿಳೆ ಎಂದು ನಿಂದಿಸಲಾಗುತ್ತದೆ.

ಬಾಯಿ ಬಿಟ್ಟರೆ ಸಂಸ್ಕೃತಿ, ಸಂಸ್ಕಾರ, ಸ್ತ್ರೀಯರನ್ನು ಗೌರವಿಸುವ ಸಮಾಜ ನಮ್ಮದು ಎಂದು ಹೇಳುವ ಪುರುಷರೇ ತಮ್ಮ ನರನಾಡಿಗಳಲ್ಲಿ ಸ್ತ್ರೀ ದ್ವೇಷವನ್ನು ಮೈತುಂಬಿಕೊಂಡಿರುತ್ತಾರೆ. ಸ್ತ್ರೀಯರನ್ನು ಭೋಗದ ವಸ್ತುವಾಗಿ, ಜೀತದಾಳಾಗಿ ನೋಡುವ ಪುರುಷಪ್ರಧಾನ ವ್ಯವಸ್ಥೆಯೊಳಗೆ ಧಾರ್ಮಿಕ ಆಚರಣೆ, ನಂಬಿಕೆಯ ಹೆಸರಿನಲ್ಲಿ ಗಂಡಿನ ಅಡಿಯಾಳಾಗಿ ಬಂಧಿಸಿಡುವ ವ್ಯವಸ್ಥಿತ ಹುನ್ನಾರ ಒಂದು ಕಡೆಯಾದರೆ, ಸುಶಿಕ್ಷಿತರಾಗಿ ಉನ್ನತ ಸ್ಥಾನದಲ್ಲಿರುವ ಮಹಿಳೆಯರನ್ನೂ ಗೌರವಿಸದ ಅಹಂಕಾರ ಪ್ರವೃತ್ತಿ ಮತ್ತೊಂದೆಡೆ. ಸ್ಥಳೀಯ ಮಟ್ಟದ ರಾಜಕಾರಣಿ ರಾಜೀವ ಗೌಡನಿಗೆ ಒಬ್ಬ ಕೆಎಎಸ್ ಅಧಿಕಾರಿಯ ಜೊತೆಗೆ ಮಾತನಾಡುವಾಗ ಇದ್ದದ್ದು ಆಕೆ ಹೆಣ್ಣು, ತಾನು ಗಂಡು ಎಂಬ ಅದೇ ಅಹಂ. ರಾಜಕಾರಣಿ, ಮಂತ್ರಿಗಳ ಬೆಂಬಲಿಗ ಎಂಬ ಧಿಮಾಕು. ಈ ದುಷ್ಟನ ವಿರುದ್ಧ ಪ್ರಕರಣ ದಾಖಲಾಗಿದೆ. ಅಷ್ಟೇ ಆದರೆ ಸಾಲದು, ಕಾನೂನಿನಡಿ ಶಿಕ್ಷೆ ಆಗಬೇಕು. ಉಳಿದ ಪುರುಷಹಂಕಾರಿಗಳಿಗೆ ಪಾಠವಾಗಬೇಕು.

ಸ್ತ್ರೀನಿಂದನೆಯ ಪ್ರಕರಣಗಳನ್ನು ಎಲ್ಲರೂ ಖಂಡಿಸಬೇಕು. ಶೋಷಣೆಗೆ ಒಳಗಾಗುವವರಿಗೆ ಯಾವುದೇ ಜಾತಿ, ಧರ್ಮ, ಪಕ್ಷ ಇಲ್ಲ. ದುರಾದೃಷ್ಟವೆಂದರೆ ರಾಜಕೀಯ, ಧರ್ಮ ನೋಡಿ ಖಂಡಿಸುವ ಮತ್ತು ಖಂಡಿಸದಿರುವ ವರ್ಗವೊಂದಿದೆ. ಅತ್ಯಾಚಾರ ಕೊಲೆ ಪ್ರಕರಣಗಳ ಅಪರಾಧಿಗಳನ್ನೂ ಮಹಿಳೆಯರೇ ಬೆಂಬಲಿಸುವ ಸಮರ್ಥಿಸುವ, ಸಂತ್ರಸ್ತರನ್ನೇ ನಿಂದಿಸುವ ಬೆಳವಣಿಗೆಗೆ ಈ ಕಾಲ ಸಾಕ್ಷಿಯಾಗಿದೆ. ಉನ್ನಾಂವ್ ಅತ್ಯಾಚಾರ ಅಪರಾಧಿ, ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಬಿಜೆಪಿಯ ಮಾಜಿ ಶಾಸಕ ಕುಲದೀಪ ಸಿಂಗ್ ಸೆಂಗರ್‌ಗೆ ಜಾಮೀನು ನೀಡಿ ನಂತರ ತಡೆ ಹಿಡಿದ ಪ್ರಕರಣದಲ್ಲಿ ಆತನಿಗೆ ಬೆಂಬಲಿಸಿ ದೆಹಲಿಯಲ್ಲಿ ಒಂದು ಗುಂಪು ಘೋಷಣೆ ಕೂಗಿತ್ತು. ತಂಡದ ಮುಂಚೂಣಿಯಲ್ಲಿ ಇದ್ದದ್ದು ಒಬ್ಬ ಯುವತಿ! ಇದು ಸ್ವಸ್ಥ ಸಮಾಜದ ಲಕ್ಷಣವಲ್ಲ. ಮಹಿಳೆಯರ ಮೇಲಿನ ದೌರ್ಜನ್ಯವನ್ನು ಇಡೀ ಸ್ತ್ರೀಕುಲವೇ ಒಟ್ಟಾಗಿ ವಿರೋಧಿಸಬೇಕಿದೆ.

ಮನರೇಗಾ: ವಿಧಾನಮಂಡಲದಲ್ಲಿ ಚರ್ಚಿಸಬೇಕೇ, ಬೇಡವೇ?

ವಿಧಾನಮಂಡಲದಲ್ಲಿ ಮನರೇಗಾ ವಿಷಯವನ್ನು ಚರ್ಚಿಸಬೇಕು. ಇದು ಒಕ್ಕೂಟ ವ್ಯವಸ್ಥೆಯ ಆತ್ಮಕ್ಕೆ ಸಂಬಂಧಿಸಿದ್ದು, ಚರ್ಚೆ ಬೇಡ ಎನ್ನುವುದು ಅಸಮಂಜಸ. ಇದು ಕೇವಲ ರಾಜಕೀಯವಲ್ಲ, ಗ್ರಾಮೀಣ ಭಾರತದ ಭವಿಷ್ಯಕ್ಕೆ ಸಂಬಂಧಿಸಿದ್ದು. ಜನವರಿ 22ರಿಂದ ನಡೆಯಲಿರುವ ಜಂಟಿ ಅಧಿವೇಶನವು ಈ ದಿಕ್ಕಿನಲ್ಲಿ ಮುಖ್ಯ ಹೆಜ್ಜೆಯಾಗಿದೆ.

ಭಾರತದ ಗ್ರಾಮೀಣ ಭಾಗದಲ್ಲಿ ಉದ್ಯೋಗ ಭದ್ರತೆಯನ್ನು ಒದಗಿಸುವ ಮಹತ್ವದ ಯೋಜನೆಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ(ಮನರೇಗಾ)ಯನ್ನು ಕೇಂದ್ರ ಸರ್ಕಾರವು 2025ರ ಡಿಸೆಂಬರ್‌ನಲ್ಲಿ ಪ್ರಸ್ತಾಪಿಸಿದ ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕಾ ಮಿಷನ್(ಗ್ರಾಮೀಣ) ಕಾಯ್ದೆಯ ಮೂಲಕ ರದ್ದುಪಡಿಸುವ ನಿರ್ಧಾರವು ದೇಶಾದ್ಯಂತ ಭಾರೀ ಚರ್ಚೆಗೆ ಕಾರಣವಾಗಿದೆ. ಈ ಹೊಸ ಕಾಯ್ದೆಯು ಮನರೇಗಾವನ್ನು ಬದಲಿಸುವ ಉದ್ದೇಶದಿಂದ ಬಂದಿದ್ದು, ಅದರ ಮೂಲ ತತ್ವಗಳನ್ನು ಬದಲಾಯಿಸಿ, ರಾಜ್ಯಗಳ ಮೇಲೆ ಹೆಚ್ಚುವರಿ ಹಣಕಾಸಿನ ಭಾರ ಹೇರಿ, ಬೇಡಿಕೆ ಆಧಾರಿತ ಹಕ್ಕುಗಳನ್ನು ಕೇಂದ್ರೀಕೃತ ಯೋಜನೆಯಾಗಿ ಪರಿವರ್ತಿಸುತ್ತದೆ ಎಂಬ ಟೀಕೆಗಳು ಕೇಳಿಬರುತ್ತಿವೆ. ಈ ಸಂದರ್ಭದಲ್ಲಿ, ರಾಜ್ಯ ವಿಧಾನಮಂಡಲದಲ್ಲಿ ಈ ವಿಷಯವನ್ನು ಚರ್ಚಿಸಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆಯೂ ಮುಖ್ಯವಾಗುತ್ತದೆ.

ವಿಶೇಷವಾಗಿ ಕರ್ನಾಟಕದಂತಹ ರಾಜ್ಯಗಳಲ್ಲಿ, ಗ್ರಾಮೀಣ ಆರ್ಥಿಕತೆಯ ಮೇಲೆ ಮನರೇಗಾದ ಪ್ರಭಾವ ದೊಡ್ಡದಿದ್ದು, ಈ ಚರ್ಚೆಯ ಅಗತ್ಯತೆ ಸೂಕ್ತವಾಗಿದೆ.

ಮನರೇಗಾ ಕುರಿತು ಏಕೆ ಚರ್ಚೆಯಾಗಬೇಕು?

ಪ್ರಸ್ತುತದಲ್ಲಿ ಪ್ರತಿ ರಾಜ್ಯ ವಿಧಾನಮಂಡಲಗಳೂ ಮನರೇಗಾ ವಿಷಯವನ್ನು ಚರ್ಚಿಸಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಮನರೇಗಾ ಕೇಂದ್ರ ಯೋಜನೆಯಾದರೂ, ಅದರ ಅನುಷ್ಠಾನ ರಾಜ್ಯಗಳ ಮೂಲಕವೇ ನಡೆಯುತ್ತದೆ. ಹೊಸ ಕಾಯ್ದೆ(ವಿಬಿ ಜಿ ರಾಮ್ ಜಿ)ಯು ರಾಜ್ಯಗಳ ಮೇಲೆ ಶೇ.40ರಷ್ಟು ಹಣಕಾಸಿನ ಭಾರ ಹೇರಿದ್ದರಿಂದ, ಇದು ರಾಜ್ಯ ಬಜೆಟ್ ಮೇಲೆ ಪರಿಣಾಮ ಬೀರುತ್ತದೆ. ಕರ್ನಾಟಕದಂತಹ ರಾಜ್ಯದಲ್ಲಿ, ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ವಲಯಕ್ಕೆ ಮನರೇಗಾ ನಿರ್ಣಾಯಕವಾಗಿದೆ. ಚರ್ಚೆಯ ಮೂಲಕ ರಾಜ್ಯದ ಹಿತಾಸಕ್ತಿಗಳನ್ನು ರಕ್ಷಿಸಬಹುದು.

ಮನರೇಗಾ ಸಂವಿಧಾನದ ನಿರ್ದೇಶಕ ತತ್ವಗಳ ಆಧಾರದ ಮೇಲೆ ನಿರ್ಮಿತವಾಗಿದ್ದು, ಉದ್ಯೋಗದ ಹಕ್ಕನ್ನು ಖಾತರಿಪಡಿಸುತ್ತದೆ. ಹೊಸ ವಿಬಿ ಜಿ ರಾಮ್ ಜಿ ಕಾಯ್ದೆಯು ಇದನ್ನು ದುರ್ಬಲಗೊಳಿಸುತ್ತದೆ ಎಂಬುದು ಟೀಕೆ. ರಾಜ್ಯ ವಿಧಾನಮಂಡಲಗಳು ಇಂತಹ ಸಂವಿಧಾನಾತ್ಮಕ ವಿಷಯಗಳನ್ನು ಚರ್ಚಿಸಿ, ಕೇಂದ್ರಕ್ಕೆ ಸಂದೇಶ ಕಳುಹಿಸಬಹುದು. ಪಂಜಾಬ್ ಮತ್ತು ಕರ್ನಾಟಕದಂತಹ ರಾಜ್ಯಗಳು ಈಗಾಗಲೇ ವಿರೋಧದ ಧ್ವನಿ ಎತ್ತಿವೆ. ಇದು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುತ್ತದೆ.

ಗ್ರಾಮೀಣ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಚರ್ಚೆಯ ಮೂಲಕ ಪರ್ಯಾಯ ಸಲಹೆಗಳನ್ನು ನೀಡಬಹುದು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಮನರೇಗಾ ಹೆಸರು ಬದಲಾವಣೆ ಮತ್ತು ರದ್ದುಪಡಿಸುವಿಕೆಯ ವಿರುದ್ಧ ಪ್ರತಿಭಟನೆ ನಡೆಸಿದೆ. ಇದು ರಾಜಕೀಯವಾಗಿ ಸೂಕ್ಷ್ಮ ವಿಷಯವಾಗಿದ್ದು, ವಿಧಾನಮಂಡಲದಲ್ಲಿ ಚರ್ಚೆಯು ಪಾರದರ್ಶಕತೆಯನ್ನು ತರುತ್ತದೆ.

ಪ್ರಸ್ತುತ ಸನ್ನಿವೇಶದಲ್ಲಿ, ರಾಜ್ಯ ಸರ್ಕಾರವು ಈ ಹೊಸ ಕಾಯ್ದೆಯನ್ನು ವಿರೋಧಿಸಿ, ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲು ನಿರ್ಧರಿಸಿದೆ. ಜನವರಿ 22ರಿಂದ 31ರವರೆಗೆ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಕರೆಯಲು ಯೋಜಿಸಲಾಗಿದ್ದು, ಈ ವಿಷಯದ ಮೇಲೆ ವಿಶೇಷ ಚರ್ಚೆ ನಡೆಯಲಿದೆ. ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮನರೇಗಾ ಮತ್ತು ಜಿ-ರಾಮ್-ಜಿ ಯೋಜನೆಗಳ ನಡುವೆ ಸಾರ್ವಜನಿಕ ಚರ್ಚೆಗೆ ಬರುವಂತೆ ಬಿಜೆಪಿಗೆ ಸವಾಲು ಹಾಕಿದ್ದಾರೆ. ಇದರಿಂದಾಗಿ, ರಾಜ್ಯ ಮಟ್ಟದಲ್ಲಿ ಈ ವಿಷಯವನ್ನು ಚರ್ಚಿಸುವುದು ಅನಿವಾರ್ಯವಾಗಿದೆ ಎಂಬುದು ಸ್ಪಷ್ಟ.



ಮನರೇಗಾ ಚರ್ಚೆ ಬೇಡವೆಂಬ ವಾದ ಸರಿಯೇ? ತಪ್ಪೇ?

ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಅವರು ಈ ದಿನ.ಕಾಮ್‌ನೊಂದಿಗೆ ಮಾತನಾಡಿ, ''ಸಂವಿಧಾನದ ಅಡಿ ರಾಜ್ಯ ವಿಧಾನಸಭೆ, ಲೋಕಸಭೆಗಳಲ್ಲಿ ವಿಶೇಷ ಅಧಿವೇಶನ ನಡೆಸಿ ಚರ್ಚಿಸುವ ಅವಕಾಶವಿದೆ. ಈ ಹಿಂದೆಯೂ ಕಾವೇರಿ ವಿಚಾರಕ್ಕೆ ಸಂಬಂಧಿಸಿದಂತೆ ವಿಶೇಷ ಅಧಿವೇಶನಗಳು ನಡೆದಿವೆ. ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಮನರೇಗಾ ಕಾಯ್ದೆಯನ್ನು ರಚಿಸಲಾಯಿತು. ಇಂತಹ ಕಾಯ್ದೆಯನ್ನು ರದ್ದು ಮಾಡುವ ಮೂಲಕ ಇಂದು ಜನರ ಬದುಕಿನ ಹಕ್ಕನ್ನು ಕಸಿಯುವಂತಹ ಹುನ್ನಾರ ನಡೆಯುತ್ತಿದೆ'' ಎಂದು ಆರೋಪಿಸಿದರು.

''ಮಹಾತ್ಮ ಗಾಂಧಿ ಹೆಸರನ್ನು ತೆಗೆದು ನಾಥೂರಾಂ ಗೋಡ್ಸೆ ಹೆಸರನ್ನು ಸಂವಿಧಾನದಲ್ಲಿ ತುರುಕುವುದಕ್ಕಾಗಿ ಇಡೀ ಕಾಯ್ದೆಯನ್ನೇ ರದ್ದು ಮಾಡಲಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಪಾಲೂ ಇರುವುದರಿಂದ ಕೇಂದ್ರ ಸರ್ಕಾರದ ಇಂತಹ ನಡೆಯನ್ನು ರಾಜ್ಯದ ಜನರೆದುರು ಬಟಾಬಯಲು ಮಾಡಲು ಸಂವಿಧಾನಾತ್ಮಕವಾಗಿ ವಿಶೇಷ ಅಧಿವೇಶನ ಹಮ್ಮಿಕೊಳ್ಳಲಾಗಿದೆ. ಅದಕ್ಕೆ ಅನುಗುಣವಾಗಿ ಚರ್ಚೆಯಾಗುತ್ತದೆ'' ಎಂದು ತಿಳಿಸಿದರು.

''ಭಾರತದ ಗ್ರಾಮೀಣ ಪ್ರದೇಶದ ತಳ ವರ್ಗಗಳಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ ಮನರೇಗಾ ಕಾಯ್ದೆಯನ್ನು ಮರುಜಾರಿಗೊಳಿಸಬೇಕು. ಗ್ರಾಮೀಣ ಕೂಲಿಕಾರ್ಮಿಕರನ್ನು ಪ್ರೋತ್ಸಾಹಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಮನರೇಗಾ ಚರ್ಚೆಗೆ ವಿಶೇಷ ಅಧಿವೇಶನ ನಡೆಸುವುದು ಬೇಡ ಎಂಬ ವಾದ ಸರಿಯಲ್ಲ'' ಎಂದರು.

ರಾಜ್ಯ ಬಿಜೆಪಿ ವಕ್ತಾರರಾದ ಸತ್ಯನಾರಾಯಣ ಅವರು ಈ ದಿನ.ಕಾಮ್‌ನೊಂದಿಗೆ ಮಾತನಾಡಿ, ''ಮನರೇಗಾ ಬದಲಿಗೆ ಕೇಂದ್ರ ಸರ್ಕಾರ ಹೊಸ ಕಾಯ್ದೆಯನ್ನು ಜಾರಿಗೊಳಿಸಿದೆ. ಮನರೇಗಾದಲ್ಲಿದ್ದಂತಹ ಭ್ರಷ್ಟಾಚಾರವನ್ನು ತಡೆಯುವುದಕ್ಕಾಗಿ ಹೊಸ ಯೋಜನೆ ತರಲಾಗಿದೆ. ಇದರಿಂದ 125 ದಿನಗಳ ಕೆಲಸ ನೀಡಲಾಗುತ್ತಿದೆ. 100 ದಿನಗಳಿಗೆ 90:10ರ ಅನುಪಾತದಲ್ಲಿ ಅನುದಾನ ನೀಡಲಾಗುತ್ತಿತ್ತು. ಈಗ 125 ದಿನಗಳಿಗೆ ಕೆಲಸ ಹೆಚ್ಚಳವಾಗಿರುವ ಕಾರಣ 60:40ರ ಅನುಪಾತದಲ್ಲಿ ಅನುದಾನ ರೂಪಿಸಲಾಗುತ್ತದೆ. ಆದರೂ ವಿಶೇಷ ಅಧಿವೇಶನ ನಡೆಸುವ ಅಗತ್ಯವಿಲ್ಲ. ಇದರಿಂದ ಸಮಯ ವ್ಯರ್ಥವಾಗುತ್ತದೆಯೇ ಹೊರತು ಬೇರೇನೂ ಆಗುವುದಿಲ್ಲ'' ಎಂದು ಹೇಳಿದರು.

ನರೇಗಾದ ಮಹತ್ವ ಮತ್ತು ಹೊಸ ಕಾಯ್ದೆಯ ಟೀಕೆಗಳು

ಮನರೇಗಾ ಅಡಿಯಲ್ಲಿ, ಪಂಚಾಯತ್‌ಗಳು ಗ್ರಾಮದ ಶಾಲಾ ಕಾಂಪೌಂಡ್‌ಗಳ ನಿರ್ಮಾಣ, ಆಟದ ಮೈದಾನ, ಗೋಮಾಳ, ಕೃಷಿ ಹೊಂಡಗಳ ನಿರ್ಮಾಣ ಸೇರಿದಂತೆ ಇತರ ಆಸ್ತಿಗಳಲ್ಲಿ ಉದ್ಯೋಗ ಸೃಷ್ಟಿಸಲಾಗುತ್ತಿತ್ತು. ಮನರೇಗಾ ರದ್ದತಿಯೊಂದಿಗೆ ಈಗ ಇಂತಹ ಕಾಮಗಾರಿಗಳೂ ಸ್ಥಗಿತಗೊಳ್ಳುತ್ತವೆ. ಮನರೇಗಾ ರದ್ದತಿಯಿಂದ ಅಧಿಕಾರದ ವಿಕೇಂದ್ರೀಕರಣಕ್ಕೆ ಹೊಡೆತ ಬೀಳುತ್ತದೆ. ಈ ಹಿಂದೆ ಮನರೇಗಾ ಅಡಿಯಲ್ಲಿ, ಪಂಚಾಯತ್‌ಗಳು ಕೆಲಸದ ಬಗ್ಗೆ ನಿರ್ಧರಿಸುವ ಹಕ್ಕನ್ನು ಹೊಂದಿದ್ದವು. ಈಗ ಅದನ್ನು ಹೊಸ ವಿಕ್ಷಿತ್ ಭಾರತ್-ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್(ವಿಬಿ ಜಿ ರಾಮ್ ಜಿ) ಕಾಯ್ದೆ, 2025ರ ಅಡಿ ತೆಗೆದುಹಾಕಲಾಗಿದೆ. ಕೇಂದ್ರ ಸರ್ಕಾರವು ಗುತ್ತಿಗೆದಾರರಿಗೆ ಪ್ರಯೋಜನಕಾರಿಯಾಗುವಂತೆ ಕೆಲಸದ ಬಗ್ಗೆ ನಿರ್ಧರಿಸುತ್ತದೆ. ಹಾಗಾಗಿ ಕಾರ್ಮಿಕರು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ()ದಂತಹ ಗುತ್ತಿಗೆದಾರರ ಕೈಯ್ಯಾಳುಗಳಾಗಿ ಕೆಲಸ ಮಾಡಬೇಕಾಗುತ್ತದೆ.

ಮನರೇಗಾ ಯೋಜನೆಯು 2005ರಲ್ಲಿ ಯುಪಿಎ ಸರ್ಕಾರದಿಂದ ಜಾರಿಗೆ ತರಲಾಯಿತು. ಇದು ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ ಕನಿಷ್ಠ 100 ದಿನಗಳ ಉದ್ಯೋಗವನ್ನು ಖಾತರಿಪಡಿಸುತ್ತದೆ. ಇದು ಬೇಡಿಕೆ ಆಧಾರಿತವಾಗಿದ್ದು, ಕಾನೂನು ಹಕ್ಕುಗಳನ್ನು ಒದಗಿಸುತ್ತದೆ. ರಾಜ್ಯದಲ್ಲಿ, ಈ ಯೋಜನೆಯು ಲಕ್ಷಾಂತರ ಗ್ರಾಮೀಣ ಕಾರ್ಮಿಕರಿಗೆ ಜೀವನಾಧಾರವಾಗಿದೆ. 2025ರಲ್ಲಿ ಮನರೇಗಾ ಅಡಿ ರಾಜ್ಯದ ಸುಮಾರು 2 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿದೆ ಎಂದು ಅಂದಾಜಿಸಲಾಗಿದೆ. ಆದರೆ ಹೊಸ ವಿಬಿ-ಜಿ ರಾಮ್ ಜಿ ಯೋಜನೆಯು ಮನರೇಗಾ ಕಾಯ್ದೆಯನ್ನು ರದ್ದುಪಡಿಸಿ, ಕೇಂದ್ರೀಕೃತ ನಿರ್ವಹಣೆಯನ್ನು ತರುತ್ತದೆ. ಇದರಲ್ಲಿ ರಾಜ್ಯಗಳು ಶೇ.40ರಷ್ಟು ಹಣಕಾಸಿನ ಹೊರೆ ಬೀಳುತ್ತದೆ. ಇದರಿಂದ ಆದಾಯ ಕಡಿಮೆ ಇರುವ ರಾಜ್ಯಗಳಿಗೆ ಹೊರೆಯಾಗುತ್ತದೆ.

ಹೊಸ ವಿಬಿ ಜಿ ರಾಮ್ ಜಿ ಮನರೇಗಾದ ನಾಶವಾಗಿದ್ದು, ಮಹಿಳೆಯರ ಹಕ್ಕುಗಳನ್ನು ಕಡಿಮೆ ಮಾಡುತ್ತದೆ. ಗ್ರಾಮ ಸಭೆಗಳನ್ನು ದುರ್ಬಲಗೊಳಿಸುತ್ತದೆ ಮತ್ತು ಕೇಂದ್ರ ಸರ್ಕಾರದ ಅಧಿಕಾರವನ್ನು ಹೆಚ್ಚಿಸುತ್ತದೆ. ಪಂಜಾಬ್‌ನಂತಹ ರಾಜ್ಯಗಳು ವಿಶೇಷ ಅಧಿವೇಶನ ಕರೆದು ವಿರೋಧಿಸಿವೆ ಮತ್ತು ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಈ ಕಾಯ್ದೆಯು ಗ್ರಾಮೀಣ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ ಎಂದು ಟೀಕಿಸಿದ್ದಾರೆ.

ಕೆಲವರು ಮನರೇಗಾ ವಿಷಯವನ್ನು ರಾಜ್ಯ ಮಟ್ಟದಲ್ಲಿ ಚರ್ಚಿಸುವುದು ಅನಗತ್ಯ ಎನ್ನಬಹುದು. ಮನರೇಗಾ ಕೇಂದ್ರ ಕಾಯ್ದೆಯಾಗಿದ್ದರಿಂದ, ಅದರ ರದ್ದುಪಡಿಸುವಿಕೆ ಪಾರ್ಲಿಮೆಂಟ್‌ನಲ್ಲಿ ನಿರ್ಧರಿತವಾಗಿದೆ. ರಾಜ್ಯಗಳು ಕೇವಲ ಅನುಷ್ಠಾನಕಾರರಾಗಿದ್ದು, ಚರ್ಚೆ ಮಾಡುವುದರಿಂದ ಸಮಯ ವ್ಯರ್ಥ ಎಂಬ ಅಭಿಪ್ರಾಯವಿದೆ. ಅಲ್ಲದೆ, ಹೊಸ ವಿಬಿ ಜಿ ರಾಮ್ ಜಿ ಕಾಯ್ದೆಯು ಆಧುನಿಕ ಗ್ರಾಮೀಣ ಅಗತ್ಯಗಳಿಗೆ ಹೊಂದಿಕೊಳ್ಳುವಂತಿದ್ದು, ಪ್ರಯೋಜನಕಾರಿ ಎಂಬುದು ಬಿಜೆಪಿ ನಾಯಕರ ವಾದವಾಗಿದೆ. ಆದರೆ ರಾಜ್ಯಗಳ ಹಣಕಾಸು ಮತ್ತು ಸ್ಥಳೀಯ ಹಕ್ಕುಗಳು ಇದರಲ್ಲಿ ತೊಡಗಿಕೊಂಡಿರುವುದರಿಂದ ಬಿಜೆಪಿಗರ ಇಂತಹ ವಾದಗಳು ದುರ್ಬಲವಾಗಿವೆ.

ರಾಜ್ಯ ವಿಧಾನಮಂಡಲಗಳು ಈ ವಿಷಯವನ್ನು ಚರ್ಚಿಸಬೇಕು. ಇದು ಒಕ್ಕೂಟ ವ್ಯವಸ್ಥೆಯ ಆತ್ಮಕ್ಕೆ ಸಂಬಂಧಿಸಿದ್ದು, ಚರ್ಚೆ ಬೇಡ ಎನ್ನುವುದು ಅಸಮಂಜಸ. ಮನರೇಗಾ ವಿಚಾರ ಕೇವಲ ರಾಜಕೀಯವಲ್ಲ, ಗ್ರಾಮೀಣ ಭಾರತದ ಭವಿಷ್ಯಕ್ಕೆ ಸಂಬಂಧಿಸಿದ್ದು. ಕರ್ನಾಟಕದಲ್ಲಿ ಜನವರಿ 22ರಿಂದ ನಡೆಯಲಿರುವ ಜಂಟಿ ಅಧಿವೇಶನವು ಈ ದಿಕ್ಕಿನಲ್ಲಿ ಮುಖ್ಯ ಹೆಜ್ಜೆಯಾಗಿದೆ. ಚರ್ಚೆಯ ಮೂಲಕ ರಾಜ್ಯಗಳು ಕೇಂದ್ರಕ್ಕೆ ತಮ್ಮ ಧ್ವನಿಯನ್ನು ಮುಟ್ಟಿಸಿ, ಈ ಮೂಲಕ ಮನರೇಗಾದಂತಹ ಕಾಯ್ದೆಗಳನ್ನು ರಕ್ಷಿಸಬಹುದು. ಇಲ್ಲದಿದ್ದರೆ, ಗ್ರಾಮೀಣ ಜನರ ಬದುಕಿನ ಹಕ್ಕು ನಾಶವಾಗುವುದು ಅನಿವಾರ್ಯವಾಗುತ್ತದೆ.

ಸಂಕ್ರಾಂತಿ ರಾಜಕೀಯ: ಬಿಹಾರದಲ್ಲಿ 'ದಹಿ-ಚೂಡ'ದ ಬಟ್ಟಲಲ್ಲಿ ಬೆಂದ ರಾಜಕೀಯ ಸಮೀಕರಣಗಳು!

ಬಿಹಾರದಲ್ಲಿ ಮಕರ ಸಂಕ್ರಾಂತಿ ಕೇವಲ ಸುಗ್ಗಿ ಹಬ್ಬವಷ್ಟೇ ಅಲ್ಲ; ಅದು ರಾಜ್ಯದ ರಾಜಕೀಯ ಹವಾಮಾನವನ್ನು ಅಳೆಯುವ ಅತ್ಯಂತ ವಿಶ್ವಾಸಾರ್ಹ ಮಾಪಕವೂ ಹೌದು. ಚಳಿ ಕಾಯಿಸಲು ಜನರು ಮನೆಯಲ್ಲಿದ್ದರೆ, ಪಾಟ್ನಾದ ರಾಜಕೀಯ ನಾಯಕರು ಮಾತ್ರ ದಹಿ-ಚೂಡ (ಮೊಸರು ಮತ್ತು ಅವಲಕ್ಕಿ) ಕೂಟಗಳ ಹೆಸರಿನಲ್ಲಿ ಹೊಸ ರಾಜಕೀಯ ಸಮೀಕರಣಗಳನ್ನು ಬೇಯಿಸುವುದರಲ್ಲಿ ನಿರತರಾಗಿರುತ್ತಾರೆ. ನೆನ್ನೆ (ಜನವರಿ 15) ನಡೆದ ಸಂಕ್ರಾಂತಿ ಆಚರಣೆಯು ಇದಕ್ಕೆ ಸಾಕ್ಷಿಯಾಯಿತು. ಒಂದೆಡೆ ಲಾಲು ಪ್ರಸಾದ್ ಯಾದವ್ ತಮ್ಮ ಮುನಿಸಿಕೊಂಡ ಮಗ ತೇಜ್ ಪ್ರತಾಪ್ ಯಾದವ್ ಅವರ ಮನೆಗೆ ದಿಢೀರ್ ಭೇಟಿ ನೀಡಿ ಕುಟುಂಬದ ಒಗ್ಗಟ್ಟಿನ ಸಂದೇಶ ರವಾನಿಸಿದರೆ, ಮತ್ತೊಂದೆಡೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಎನ್‌ಡಿಎ ಮೈತ್ರಿಕೂಟದ ನಾಯಕರೊಂದಿಗೆ ಕಾಣಿಸಿಕೊಂಡು ಮೈತ್ರಿ ಧರ್ಮದ ಸಂದೇಶ ಸಾರಿದರು.

ದಹಿ-ಚೂಡ: ಮಣ್ಣಿನ ಮಕ್ಕಳ ಊಟದಿಂದ ಪವರ್ ಲಂಚ್‌ವರೆಗೆ

ಬಿಹಾರ, ಜಾರ್ಖಂಡ್ ಮತ್ತು ಪೂರ್ವ ಉತ್ತರ ಪ್ರದೇಶಗಳಲ್ಲಿ ಸಂಕ್ರಾಂತಿಯಂದು ದಹಿ-ಚೂಡ (ಗಟ್ಟಿ ಮೊಸರು, ಅವಲಕ್ಕಿ, ಬೆಲ್ಲ ಅಥವಾ ಸಕ್ಕರೆ ಮತ್ತು ಎಳ್ಳು ಉಂಡೆ) ಸೇವಿಸುವುದು ಸಾಂಪ್ರದಾಯಿಕ ಪದ್ಧತಿ. ಆದರೆ, ಈ ಕೃಷಿಕರ ಹಬ್ಬವನ್ನು ಪ್ರಬಲ ರಾಜಕೀಯ ಅಸ್ತ್ರವನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಯಾದವ್ ಅವರಿಗೆ ಸಲ್ಲುತ್ತದೆ.

1990ರ ದಶಕದಲ್ಲಿ ಲಾಲು ಬಿಹಾರದ ಮುಖ್ಯಮಂತ್ರಿಯಾಗಿದ್ದಾಗ, ಅವರು ಈ ಹಬ್ಬವನ್ನು ಜನಸಾಮಾನ್ಯರೊಂದಿಗೆ ಬೆರೆಯುವ ವೇದಿಕೆಯನ್ನಾಗಿ ಮಾಡಿಕೊಂಡರು. ಪಾಟ್ನಾದ 10, ಸರ್ಕ್ಯುಲರ್ ರೋಡ್‌ನಲ್ಲಿರುವ ರಾಬ್ಡಿ ದೇವಿ ನಿವಾಸದಲ್ಲಿ ನಡೆಯುತ್ತಿದ್ದ ಲಾಲು ಅವರ ದಹಿ-ಚೂಡ ಕೂಟಗಳು ದೇಶಾದ್ಯಂತ ಪ್ರಖ್ಯಾತಿ ಪಡೆದಿದ್ದವು. ಇದು ಕೇವಲ ಊಟದ ಕೂಟವಾಗಿರಲಿಲ್ಲ; ಅದು ಲಾಲು ಅವರ ಸಾಮಾಜಿಕ ನ್ಯಾಯದ ಮತ್ತು ಮಣ್ಣಿನ ಮಗ ಎಂಬ ಇಮೇಜ್‌ಅನ್ನು ಗಟ್ಟಿಗೊಳಿಸುವ ತಂತ್ರವಾಗಿತ್ತು. ಸಾವಿರಾರು ಕಾರ್ಯಕರ್ತರು, ಬಡವರು ಮತ್ತು ಗಣ್ಯರು ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುತ್ತಿದ್ದ ಆ ದೃಶ್ಯಗಳು, ಲಾಲು ಅವರ ಜನಪ್ರಿಯತೆಯನ್ನು ಹೆಚ್ಚಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದವು.

ಕಾಲಕ್ರಮೇಣ, ಈ ಕೂಟಗಳು ಬಿಹಾರದ ರಾಜಕೀಯ ಬದಲಾವಣೆಗಳನ್ನು ಸೂಚಿಸುವ ದಿಕ್ಸೂಚಿಗಳಾದವು. ಯಾವ ನಾಯಕ ಯಾರ ಔತಣಕೂಟಕ್ಕೆ ಹೋಗುತ್ತಾರೆ, ಯಾರು ಗೈರಾಗುತ್ತಾರೆ ಎಂಬುದು ಮುಂದಿನ ಮೈತ್ರಿ ಬದಲಾವಣೆಯ ಮುನ್ಸೂಚನೆಯಾಗಿರುತ್ತಿತ್ತು. ಉದಾಹರಣೆಗೆ, ನಿತೀಶ್ ಕುಮಾರ್ ಅವರು ಲಾಲು ಅವರ ಔತಣಕೂಟದಲ್ಲಿ ಭಾಗವಹಿಸಿದರೆ ಎನ್‌ಡಿಎ ಪಾಳಯದಲ್ಲಿ ನಡುಕ ಹುಟ್ಟುತ್ತಿತ್ತು. ಅದೇ ಅವರು ಅಲ್ಲಿಗೆ ಹೋಗದೆ ಬಿಜೆಪಿ ನಾಯಕರ ಕೂಟಕ್ಕೆ ತೆರಳಿದರೆ ಮಹಾಘಟಬಂಧನ ಮುರಿಯುವ ಸೂಚನೆ ಸಿಗುತ್ತಿತ್ತು. ಹೀಗೆ, ಒಂದು ಬಟ್ಟಲು ಮೊಸರು-ಅವಲಕ್ಕಿ ಬಿಹಾರದ ಅಧಿಕಾರ ಬದಲಾವಣೆಯ ಸಂಕೇತವಾಗಿ ಮಾರ್ಪಟ್ಟಿತು.

ಈ ಬಾರಿಯ ಸಂಕ್ರಾಂತಿ ಬಿಹಾರ ರಾಜಕೀಯದಲ್ಲಿ ಮಹತ್ವದ ತಿರುವುಗಳಿಗೆ ಸಾಕ್ಷಿಯಾಗಿದೆ. ತೇಜ್ ಪ್ರತಾಪ್ ಶಕ್ತಿ ಪ್ರದರ್ಶನ ಮತ್ತು ಲಾಲು ಆಗಮನ. ಆರ್‌ಜೆಡಿಯಿಂದ ಅಂತರ ಕಾಯ್ದುಕೊಂಡಿದ್ದ ಲಾಲು ಅವರ ಹಿರಿಯ ಪುತ್ರ ತೇಜ್ ಪ್ರತಾಪ್ ಯಾದವ್ ಏರ್ಪಡಿಸಿದ್ದ ಬೃಹತ್ ದಹಿ-ಚೂಡ ಕೂಟಕ್ಕೆ ಸ್ವತಃ ಲಾಲು ಪ್ರಸಾದ್ ಯಾದವ್ ಭೇಟಿ ನೀಡಿದ್ದು ದೊಡ್ಡ ಸುದ್ದಿಯಾಗಿದೆ. ಇದನ್ನು ತಂದೆ-ಮಗನ ಬಾಂಧವ್ಯ ಸರಿಪಡಿಸುವ ಮತ್ತು ಪಕ್ಷದೊಳಗಿನ ಭಿನ್ನಮತ ಶಮನಗೊಳಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗುತ್ತಿದೆ.

ಇತ್ತ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಎಲ್‌ಜೆಪಿ (ರಾಮ್ ವಿಲಾಸ್) ನಾಯಕ ಚಿರಾಗ್ ಪಾಸ್ವಾನ್ ಆಯೋಜಿಸಿದ್ದ ಔತಣಕೂಟದಲ್ಲಿ ಭಾಗವಹಿಸುವ ಮೂಲಕ ಎನ್‌ಡಿಎ ಮೈತ್ರಿಕೂಟದಲ್ಲಿ ತಾನು ಗಟ್ಟಿಯಾಗಿದ್ದೇನೆ ಎಂಬ ಸಂದೇಶ ರವಾನಿಸಿದ್ದಾರೆ.

ಮತ್ತೊಂದೆಡೆ, ಕಾಂಗ್ರೆಸ್ ಆಯೋಜಿಸಿದ್ದ ಔತಣಕೂಟಕ್ಕೆ ಸ್ವಪಕ್ಷದ ಶಾಸಕರೇ ಗೈರಾಗಿರುವುದು ಪಕ್ಷಾಂತರದ ಭೀತಿಯನ್ನು ಹೆಚ್ಚಿಸಿದೆ. ಆರು ಜನ ಕಾಂಗ್ರೆಸ್ ಶಾಸಕರು ಎನ್‌ಡಿಎ ಸೇರಬಹುದು ಎಂಬ ಗುಸುಗುಸು ಪಾಟ್ನಾದ ರಾಜಕೀಯ ವಲಯದಲ್ಲಿ ದಟ್ಟವಾಗಿದೆ.

ದೆಹಲಿ ರಾಜಕಾರಣಕ್ಕೆ ಲಗ್ಗೆ ಇಟ್ಟ ಬಿಹಾರಿ ರುಚಿ

ಬಿಹಾರದ ಗಡಿ ದಾಟಿ ದಹಿ-ಚೂಡ ರಾಜಕಾರಣ ದೆಹಲಿಯನ್ನು ತಲುಪಿದ್ದು 2000ದ ದಶಕದಲ್ಲಿ. ರಾಮ್ ವಿಲಾಸ್ ಪಾಸ್ವಾನ್, ಶರದ್ ಯಾದವ್ ಮತ್ತು ಲಾಲು ಪ್ರಸಾದ್ ಯಾದವ್ ಅವರಂತಹ ಘಟಾನುಘಟಿ ನಾಯಕರು ಕೇಂದ್ರ ರಾಜಕಾರಣದಲ್ಲಿ ಸಕ್ರಿಯರಾದಾಗ, ಅವರು ತಮ್ಮ ಪ್ರಾದೇಶಿಕ ಅಸ್ಮಿತೆಯನ್ನು ಪ್ರದರ್ಶಿಸಲು ದೆಹಲಿಯಲ್ಲೂ ಈ ಕೂಟಗಳನ್ನು ಆಯೋಜಿಸಲು ಪ್ರಾರಂಭಿಸಿದರು. ದೆಹಲಿಯ ಲುಟಿಯನ್ಸ್ ವಲಯದಲ್ಲಿ ನಡೆಯುವ ಈ ಕೂಟಗಳು ಕೇವಲ ಬಿಹಾರಿಗಳಿಗೆ ಸೀಮಿತವಾಗಿಲ್ಲ. ಪ್ರಧಾನ ಮಂತ್ರಿಗಳಿಂದ ಹಿಡಿದು ವಿರೋಧ ಪಕ್ಷದ ನಾಯಕರವರೆಗೆ ಎಲ್ಲರೂ ಇಲ್ಲಿ ಭಾಗವಹಿಸುತ್ತಾರೆ. ಸಂಸತ್ತಿನ ಚಳಿಗಾಲದ ಅಧಿವೇಶನ ಮುಗಿದ ನಂತರ ಮತ್ತು ಬಜೆಟ್ ಅಧಿವೇಶನಕ್ಕೆ ಮುನ್ನ ನಡೆಯುವ ಈ ಕೂಟಗಳು, ಪಕ್ಷಾತೀತವಾಗಿ ನಾಯಕರು ಬೆರೆಯಲು ಮತ್ತು ಅನೌಪಚಾರಿಕವಾಗಿ ಮೈತ್ರಿ ಮಾತುಕತೆಗಳನ್ನು ನಡೆಸಲು ಇದೊಂದು ವೇದಿಕೆಯಾಗಿದೆ.

ಒಟ್ಟಿನಲ್ಲಿ, ಬಿಹಾರದಲ್ಲಿ ಸಂಕ್ರಾಂತಿಯ ದಹಿ-ಚೂಡ ಕೇವಲ ಹೊಟ್ಟೆ ತುಂಬಿಸುವ ಆಚರಣೆಯಲ್ಲ; ಅದು ಅಧಿಕಾರವನ್ನು ಉಳಿಸಿಕೊಳ್ಳುವ, ಮೈತ್ರಿಗಳನ್ನು ಮುರಿಯುವ ಮತ್ತು ಹೊಸ ಸರ್ಕಾರಗಳನ್ನು ಕಟ್ಟುವ ರಾಜಕೀಯ ದಾಳವಾಗಿದೆ. ತೇಜ್ ಪ್ರತಾಪ್ ಅವರ ಮನೆಯಲ್ಲಿ ಲಾಲು ತಿಂದ ಮೊಸರು ಸಿಹಿಯಾಗಿತ್ತೇ ಅಥವಾ ನಿತೀಶ್ ಕುಮಾರ್ ಅವರ ನಡೆಯಲ್ಲಿ ಹುಳಿ ಇತ್ತೇ ಎಂಬುದು ಮುಂದಿನ ದಿನಗಳ ರಾಜಕೀಯ ಬೆಳವಣಿಗೆಗಳಲ್ಲಿ ತಿಳಿಯಲಿದೆ. ಆದರೆ ಸದ್ಯಕ್ಕಂತೂ, ಬಿಹಾರದ ರಾಜಕೀಯವು ಮೊಸರು-ಅವಲಕ್ಕಿಯಷ್ಟೇ ತಂಪಾಗಿರದೇ, ಮಸಾಲೆಭರಿತವಾಗಿದೆ ಎಂಬುದಂತೂ ಸತ್ಯ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR